بِسْمِ اللهِ الرَّحْمٰنِ الرَّحِيْم      نَحْمَدُهٗ وَنُصَلِّی عَلٰی رَسُوْلِهِ الْكَرِيْم      وَعَلٰی عَبْدِهِ الْمَسِيْحِ الْمَوْعُوْد

وَلَقَدۡ نَصَرَكُمُ اللّٰهُ بِبَدۡرٍ وَّاَنۡتُمۡ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 01

ಸಂಚಿಕೆ: 14

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

16 ಏಪ್ರಿಲ್ 2020, 16 ಶಹಾದತ್ 1399 ಹಿಜರಿ ಶಮ್‌ಸಿ,
22 ಶಾಬಾನ್ 1441 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

رَبَّنَاۤ اِنَّكَ مَنۡ تُدۡخِلِ النَّارَ
فَقَدۡ اَخۡزَيۡتَهٗ ؕ وَمَا لِلظّٰلِمِيۡنَ
مِنۡ اَنۡصَارٍ ○

*(ಆಲಿ ಇಮ್ರಾನ್ 193)*

ಅಂದರೆ: "ನಮ್ಮ ಪ್ರಭೂ, ನೀನು ಯಾರನ್ನಾದರೂ ನರಕದಲ್ಲಿ ಪ್ರವೇಶಿಸುವಂತೆ ಮಾಡಿದರೆ, ಅವನನ್ನು ನೀನು ಖಂಡಿತವಾಗಿಯೂ ನಿಂದ್ಯಗೊಳಿಸಿದೆ. ದುಷ್ಕರ್ಮಿಗಳಿಗೆ ಯಾರೂ ಸಹಾಯಕನಿಲ್ಲ.

**ಸಹಾಬರ ಪವಿತ್ರ ನಡವಳಿಕೆ ಜನರನ್ನು ಆಶ್ಚರ್ಯ ಚಕಿತಗೊಳಿಸಿದಂತೆ ಬೇರೆ ಯಾವ ಪವಾಡವು ಪ್ರಭಾವ ಬೀರಲಿಲ್ಲ.**

**ರಸೂಲುಲ್ಲಾಹ್[ಸ] ರ ಕೈಯ ಮೇಲೆ ಕಠಿಣ ಶತ್ರುಗಳು ಸಹ ಪಶ್ಚತ್ತಾಪಪಟ್ಟು ಅವರಿಗೆ ಶರಣಾದರು ಏಕೆ? ಸಹಾಬರಲ್ಲಿ ಆದ ಆ ಮಹೋನ್ನತವಾದ ಪರಿವರ್ತನೆಗಳು ಅವರ ಪರಿಣಾಮ ಜನಕ ನಡಾವಳಿಕೆಯು ಅವರಿಗೆ ನಾಚುವಂತೆ ಮಾಡಿತು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಇದೊಂದು ನಿಶ್ಚಯವಾದ ವಿಷಯವಾಗಿದೆ. ಯಾವೊಬ್ಬ ವ್ಯಕ್ತಿ ತನ್ನ ಸಹಾಬರೊಡನೆ ಸಹಾನುಭೂತಿಯ ಸೆಲೆ ಹೊಂದುವುದಿಲ್ಲವಾದರೆ ಅವನು ಜಿಪುಣನಾಗಿದ್ದಾನೆ. ಯಾವುದೇ ಒಂದು ಮಾರ್ಗದಲ್ಲಿ ನಾನು ಒಳಿತನ್ನು ಹಿತವನ್ನು ಕಾಣುವುದು ನನ್ನ ಕರ್ತವ್ಯವಾಗಿದೆ, ವ್ಯಾಕುಲತೆಯಿಂದ ಜನರಿಗೆ ತಿಳಿಯಪಡಿಸಬೇಕು. ಅದಕ್ಕೆ ಅವರು ಕಿವಿಗೆಡುತ್ತಾರೋ ಇಲ್ಲವೋ ಬೇರೆ ವಿಷಯವಾಗಿದೆ.

**"ಕಸ್ ಬಶನೂದ್ ಯಾನಶನೂದ್ ಮನ್ ಗುಫ್‌ತಗೂಯೆ ಮೀ ಕುನಮ್"** (ಯಾರು ಕೇಳಲಿ ಬಿಡಲಿ ನನ್ನ ಕರ್ತವ್ಯ ಅವರಿಗೆ ತಿಳಿಸುವುದಾಗಿದೆ)

ಒಬ್ಬ ವಿವೇಕಿ ವ್ಯಕ್ತಿಯಾದರೂ ಕಿವಿಗೊಟ್ಟರೆ ಸಾಕಾಗಿದೆ. ನಾನು ಸ್ಪಷ್ಟವಾಗಿ ಈ ಮಾತನ್ನು ಹೇಳಬಯಸುತ್ತೇನೆ. ಏನೆಲ್ಲ ಜನರಿಗೆ ನಾನು ಹೇಳುತ್ತೇನೆಯೋ ಈ ಭಾವನೆ ಹೊಂದಿರುತ್ತೇನೆ. ಏಕೆಂದು ಕಾರಣ ಗೊತ್ತಿಲ್ಲ, ಅಂತಹದೊಂದು ಅದಮ್ಯ ಚೇತನ ನನ್ನಲ್ಲಿ ಹುದುಗಿದೆ. ಆದ್ದರಿಂದ ನಾನು ತಡೆದುಕೊಳ್ಳಲು ಸಾಧ್ಯವಿಲ್ಲ. ಉಯಿಲು ಬರೆದುಕೊಡುವ ಮನುಷ್ಯನ ಹಾಗೆ ತಿಳಿಯಿರಿ. ಯಾರಿಗೆ ಗೊತ್ತು ಮತ್ತೆ ಇನ್ನೊಬ್ಬರಿಗೆ ಮಾದರಿಯಾಗುವ ರೀತಿಯಲ್ಲಿ ಪಾಲನೆ ಮಾಡಿರಿ. ತನ್ನ ನಡೆ ನುಡಿಯಿಂದ ಅವಶ್ಯಕತೆ ಇಲ್ಲವಾದರೆ, ನನಗೆ ಹೇಳಿ, ನೀವು ಇಲ್ಲಿ ಬರುವ ಉದ್ದೇಶವಾದರೂ ಏನು. ನಾನು ಗೌಪ್ಯ ಬದಲಾವಣೆ ಬಯಸುವುದಿಲ್ಲ. ಉನ್ನತ ಪರಿವರ್ತನೆ ಬಯಸುತ್ತೇನೆ. ಆದ್ದರಿಂದ ವಿರೋಧಿಗಳು ನಾಚುವಂತಾಗಬೇಕು. ಜನರ ಮೇಲೆ ಪ್ರಕಾಶದ ಏಕಮಾತ್ರ ಮಾರ್ಗ ಕಾಣುವಂತಾಗಬೇಕು. ನಮ್ಮ ವಿರೋಧಿಗಳು ಮಾರ್ಗಭ್ರಷ್ಟರಾಗಿದ್ದಾರೆಂದು ಮನಗೊಂಡು ಅವರಿಂದ ನಿರಾಶೆಗೊಂಡಿರಬೇಕು. ರಸೂಲುಲ್ಲಾಹ್[ಸ] ರವರ ಕೈಯ ಮೇಲೆ ಕಠಣ ಶತ್ರುಗಳು ಸಹ ಪಶ್ಚಾತ್ತಾಪಪಟ್ಟು ಅವರಿಗೆ ಶರಣಾದರು ಏಕೆ? ಸಹಾಬರಲ್ಲಿ ಆದ ಆ ಮಹೋನ್ನತವಾದ ಪರಿವರ್ತನೆಗಳು ಅವರ ಪರಿಣಾಮ ಜನಕ ನಡಾವಳಿಕೆಯು ಅವರಿಗೆ ನಾಚುವಂತೆ ಮಾಡಿತು.

**ಅಕ್‌ರಮನ ಆದರ್ಶ ನಡವಳಿಕೆ**

**ಅಕ್‌ರಮನ** ಬಗ್ಗೆ ಕೇಳಿರಬಹುದು. ಉಹದ್ ಯುದ್ಧದ ಕಾರಣಕರ್ತ ಅವನಾಗಿದ್ದ. ಅಬುಜಹಲ್ ಅವನ ಪಿತನಾಗಿದ್ದ. ಆದರೆ

*(ಪುಟ ಸಂಖ್ಯೆ 11 ರಲ್ಲಿ ಮುಂದುವರಿಸಲಾಗಿದೆ)*

**ವಿಶೇಷ ಸೂಚನೆ:**

**ಹುಝೂರ್[ಅಬಿಅ] ರವರು ನಿಮ್ಮೆಲ್ಲರ ಪತ್ರಗಳನ್ನು ನೋಡಿ ನಿಮಗೋಸ್ಕರ ದುಆ ಮಾಡುತ್ತಿದ್ದಾರೆ.**

ಹುಝೂರ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಅವರ ಬಳಿ ದುಆ ಕೋರಲು ಪತ್ರಗಳನ್ನು ಬರೆಯುವವರ ಗಮನಕ್ಕೆ ತಿಳಿಸುವುದೇನೆಂದರೆ:

ನಿಮ್ಮೆಲ್ಲರ ಪತ್ರಗಳನ್ನು ಹುಝೂರ್ ಅನ್ವರ್‌ರವರ ಸನ್ನಿಧಿಯಲ್ಲಿ ಸಾಮಾನ್ಯ ರೀತಿಯಲ್ಲಿ ಪ್ರಸ್ತುತ ಪಡಿಸಲಾಗುತ್ತಿದೆ. ಆದರೆ, ಕರೋನ ವೈರಸ್ ಸಾಂಕ್ರಮಿಕ ರೋಗ ಚಾಲ್ತಿಯಲ್ಲಿರುವ ಕಾರಣ, ಪತ್ರಗಳಿಗೆ ಉತ್ತರ ನೀಡುವ ಸಂಖ್ಯೆ ಸಾಮಾನ್ಯವಾಗಿ ಕಡಿಮೆ ಮಾಡಲಾಗಿದೆ. ಆದ್ದರಿಂದ ಪ್ರತಿಯೊಂದು ಪತ್ರಗಳಿಗೆ ಪ್ರತ್ಯೇಕವಾಗಿ ಉತ್ತರಿಸಲು ಸಾಧ್ಯವಿಲ್ಲ. ಹುಝೂರ್[ಅಬಿಅ] ರವರು ನಿಮ್ಮೆಲ್ಲರ ಪತ್ರಗಳನ್ನು ನೋಡಿ ನಿಮಗೋಸ್ಕರ ದುಆ ಮಾಡುತ್ತಿದ್ದಾರೆ. ಅಲ್ಲಾಹನು ಎಲ್ಲರಿಗೂ ಕರುಣಿಸಲಿ ಮತ್ತು ದಯಪಾಲಿಸಲಿ. ಈ ಸಾಂಕ್ರಮಿಕ ರೋಗದಿಂದ ಹಾಗೂ ಇನ್ನಿತರ ತೊಂದರೆಗಳಿಂದ ಪ್ರತಿಯೊಬ್ಬರನ್ನು ಸಂರಕ್ಷಿಸಲಿ ಮತ್ತು ಸದಾ ನಿಮ್ಮ ಮೇಲೆ ಅವನ ಪ್ರೀತಿಯ ದೃಷ್ಟಿ ಇರಲಿ. **ಆಮೀನ್.**

**(ಮುನೀರ್ ಅಹ್ಮದ್ ಜಾವೇದ್, ಪ್ರೈವೇಟ್ ಸೆಕ್ರೇಟರಿ)**

**ಇಂದು ಹರಡಿರುವ ಸಾಂಕ್ರಮಿಕ ರೋಗಗಳ ಕಾರಣಗಳಿಂದಾಗಿ ಜಮಾಅತ್ ಬಾಂಧವರು ಮನೆಗಳಲ್ಲಿಯೆ ನಮಾಝ್ ಜಮಾಅತ್ ಸಹಿತ ನಿರ್ವಹಿಸುವ ವ್ಯವಸ್ಥೆ ಮಾಡಿಕೊಳ್ಳಬೇಕು. ಹಾಗೆಯೇ ಮನೆಯ ಸದಸ್ಯರೆಲ್ಲರೂ ಸೇರಿ ಜುಮುಅ ನಮಾಝ್ ಸಹ ನಿರ್ವಹಿಸಬೇಕು.**

---

**ಪ್ರಾರ್ಥನೆ (ದುಆ) ನಿಮಿತ್ತ ಹೆಚ್ಚಿನ ಗಮನ ನೀಡುವವರಾಗಿರಿ. ಪ್ರಾರ್ಥನೆಗಳ ಮೂಲಕವೇ ನಾವು ಅಲ್ಲಾಹನ ಔದಾರ್ಯಗಳನ್ನು ಪಡೆಯಬಹುದಾಗಿದೆ. ಅಲ್ಲಾಹನಲ್ಲಿ ತಮ್ಮ ಪಾಪ ಕೃತ್ಯಗಳಿಂದ ಕ್ಷಮೆ ಯಾಚಿಸಿರಿ. ತಮ್ಮ ಹೃದಯಗಳನ್ನು ಶುದ್ಧಗೊಳಿಸಿ ಕೊಳ್ಳಿರಿ ಮತ್ತು ಸತ್ಕಾರ್ಯಗಳಲ್ಲಿ ತೊಡಗಿರಿ.**

---

**ಅಲ್ಲಾಹನು ತನ್ನ ಅನುಗ್ರಹ ದಯಪಾಲಿಸುವಂತೆ ಪ್ರಾರ್ಥಿಸಿರಿ. ಈ ಮಹಾಮಾರಿಯಿಂದ ಲೋಕವನ್ನು ಉಳಿಸುವಂತಾಗಲಿ ಮತ್ತು ಇಡೀ ಲೋಕವು ಮಾನವೀಯತೆಯ ಹಕ್ಕುಗಳನ್ನು ಪಾಲನೆ ಮಾಡುವಂತಾಗಲಿ.**

## ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಅಬಿಅ)** ದಿನಾಂಕ 27–3–2020 ಶುಕ್ರವಾರದಂದು ಜಮಾಅತಿಗೆ ನೀಡಿದ **ಸಂದೇಶ**

ತಶಹುದ್ ತಾಊಝ್ ನಂತರ ಹುಝೂರ್[ಅಬಿಅ] ಹೇಳಿದರು. ಇಂದು ಲೋಕದಲ್ಲಿ ಹಬ್ಬಿರುವ ವೈರಸಿನ ಸಾಂಕ್ರಾಮಿಕ ರೋಗದ ಹಾವಳಿಯ ಕಾರಣದಿಂದ ಸರಕಾರಗಳು ಮಸ್‌ಜಿದ್‌ಗಳಲ್ಲಿ ಬಾಜಮಾಅತ್ ನಮಾಝ್ ನಿರ್ವಹಿಸುವುದರ ಮೇಲೆ ನಿರ್ಬಂಧಗಳನ್ನು ಹೇರಿವೆ. ಬ್ರಿಟನಿನ ಸರಕಾರ ಸಹ ಮಸ್‌ಜಿದ್‌ಗಳಲ್ಲಿ ಬಾಜಮಾಅತ್ ನಮಾಝ್ ನಿರ್ವಹಿಸಬಾರದೆಂದೂ ನಿರ್ವಹಿಸುವುದಾದರೆ ಇಬ್ಬರು ಅಥವಾ ಕೆಲವು ಜನರಿಗಿಂತ ಹೆಚ್ಚಿಗಿರಬಾರದೆಂದೂ ಅವರು ಮಸ್‌ಜಿದ್ ಇರುವ ಸ್ಥಳದ ನಿವಾಸಿಗಳಾಗಬೇಕೆಂದೂ ಆಜ್ಞಾಪಿಸಿದೆ. ಈಗಲೂ ಈ ಆಜ್ಞೆ ಸ್ಪಷ್ಟವಾಗಿಲ್ಲ. ಕೆಲವರು ಒಂದು ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ ಮತ್ತು ಬೇರೆ ಕೆಲವರು ಬೇರೆ ರೀತಿಯಲ್ಲಿ ಹೇಳುತ್ತಾರೆ. ನಿಕಟ ಸಂಬಂಧಿಕರು ಮಾತ್ರ ಭಾಗವಹಿಸಬಹುದೆಂದು ಕೆಲವರು ಹೇಳುತ್ತಾರೆ. ಬೇರೆ ಕೆಲವರು ಹೇಳುತ್ತಾರೆ, ಸ್ನೇಹಿತರು ಮತ್ತು ಜೊತೆಗೆ ವಾಸಿಸುವವರು ಭಾಗವಹಿಸಬಹುದೆಂದು. ಆದುದರಿಂದ ಇಂದಿನ ಪರಿಸ್ಥಿತಿಯಲ್ಲಿ ಅಧಿಕೃತವಾಗಿ ಸ್ಪಷ್ಟನೆ ದೊರಕುವ ತನಕ ಜುಮುಅ ನಮಾಝ್ ನಿರ್ವಹಿಸಲು ಸಾಧ್ಯವಿಲ್ಲ. ಏಕೆಂದರೆ ಜುಮುಅಕ್ಕೆ ಸಂಬಂಧಿಸಿ ಕೆಲವು ವಿಷಯಗಳು ವಿಶದೀಕರಿಸುವ ಆವಶ್ಯಕತೆ ಇದೆ. ಆದುದರಿಂದ ನಾನು ಸಮಾಲೋಚನೆ ನಡೆಸಿದ ನಂತರ ಹೀಗೆ ನಿರ್ಧರಿಸಿದೆ: ಖುತುಬಕ್ಕೆ ಬದಲಾಗಿ ನನ್ನ ಕಚೇರಿಯಿಂದಲೇ ಒಂದು ಸಂದೇಶವನ್ನು ನೀಡಿ ನಿಮ್ಮೊಂದಿಗೆ ಮಾತನಾಡುವೆನು ಎಂದು. ಜನರಿಗೆ ಜುಮುಅ ದಿವಸ ಎಂ.ಟಿ.ಎ. ಮೂಲಕ ಖಲೀಫರ ಖುತ್‌ಬ ಆಲಿಸುವ ಅಭ್ಯಾಸವಾಗಿ ಬಿಟ್ಟಿದೆ. ಈ ದಿನ ಈ ಸಮಯದಲ್ಲಿ ನಾನು ಜಮಾಅತನ್ನು ಸಂಬೋಧಿಸಿ ಮಾತನಾಡದಿದ್ದರೆ ಜನರಿಗೆ ನಿರಾಶೆಯಾಗಬಹುದು. ಅದಲ್ಲದೆ ವಿವಿಧ ರೀತಿಗಳ ಊಹಾಪೋಹಗಳು ಸಹ ಪ್ರಾರಂಭವಾಗುತ್ತವೆ. ಆದುದರಿಂದ ಯಾವುದಾದರೊಂದು ರೀತಿಯಲ್ಲಿ ಜಮಾಅತನ್ನು ಸಂಬೋಧಿಸಿ ಮಾತನಾಡಬೇಕೆಂದೂ ನನ್ನ ಕಚೇರಿಯಲ್ಲಿ ಕುಳಿತುಕೊಂಡು ನಿಮ್ಮನ್ನು ಸಂಬೋಧಿಸಿ ಮಾತನಾಡಬೇಕೆಂದೂ ನಾನು ನಿರ್ಧರಿಸಿದೆ.

ಒಟ್ಟಾರೆ ಹೇಳುವುದಾದರೆ, ನಾನು ಹೇಳಿದ ಹಾಗೆ ನಾವು ಇಂದು ಜುಮುಅ ನಮಾಝ್ ನಿರ್ವಹಿಸುವುದಿಲ್ಲ. ಮುಂದೆ ನಾವು ಯಾವ ರೀತಿ ವರ್ತಿಸುವೆವು ಎಂಬುದರ ಬಗ್ಗೆ ಇನ್‌ಶಾಅಲ್ಲಾಹ್ ಮುಂದೆ ತಿಳಿಸುವೆನು. ದೀರ್ಘಕಾಲದ ತನಕ ಜುಮುಅವನ್ನು ಬಿಟ್ಟುಬಿಡಲು ಸಹ ಸಾಧ್ಯವಿಲ್ಲ. ಜಮಾಅತ್‌ನೊಂದಿಗೆ ನನ್ನ ಸಂಪರ್ಕವಿರುವುದು ಸಹ ಆವಶ್ಯಕವಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ವಿಶಿಷ್ಟವಾಗಿ ಹೆಚ್ಚು ಆವಶ್ಯಕತೆ ಇದೆ. ಆದುದರಿಂದ ನಾವು ವಕೀಲರೊಂದಿಗೆ ಮತ್ತು ಸಂಬಂಧಿತ ಜನರೊಂದಿಗೆ ಸಮಾಲೋಚಿಸಿದ ನಂತರ ಇನ್‌ಶಾಅಲ್ಲಾಹ್ ಪರಿಹಾರ ಮಾರ್ಗ ಕಂಡುಕೊಳ್ಳುವೆವು. ಜಮಾಅತಿನ ಸದಸ್ಯರೊಂದಿಗೆ ನಾನು ಹೇಳುವುದೇನೆಂದರೆ ಈ ರೋಗದ ಕಾರಣದಿಂದ ಸರಕಾರ ಮಸ್‌ಜಿದ್‌ನಲ್ಲಿ ನಮಾಝ್ ನಿರ್ವಹಿಸುವುದನ್ನು ನಿರ್ಬಂಧಿಸಿದ್ದರೆ ಜಮಾಅತ್ ಸದಸ್ಯರು ತಮ್ಮ ಮನೆಗಳಲ್ಲಿಯೇ ಬಾಜಮಾಅತ್ ನಮಾಝ್ ನಿರ್ವಹಿಸಲು ಏರ್ಪಾಡು ಮಾಡಬೇಕು. ಜುಮುಅ ಸಹ ಮನೆಯ ಸದಸ್ಯರು ಸೇರಿಕೊಂಡು ನಿರ್ವಹಿಸಬೇಕು. ಇಲ್ಲಿ ಯು.ಕೆ.ಯಲ್ಲಿ ಮಸ್‌ಜಿದ್‌ಗೆ ಒಬ್ಬೊಬ್ಬರಾಗಿ ಬಂದು ನಮಾಝ್ ನಿರ್ವಹಿಸಹುದು ಅಥವಾ ಕುಟುಂಬದ ಕೆಲವರು ಬಂದು ನಮಾಝ್ ನಿರ್ವಹಿಸಬಹುದು. ಆದರೂ ಪರಸ್ಪರ ಹತ್ತಿರವಿರಬಾರದೆಂಬ ನಿಯಮದೊಂದಿಗೆ ಹೀಗೆ ಆಜ್ಞಾಪಿಸಲಾಗಿದೆ. ಮಲ್‌ಫೂಝಾತ್‌ನಿಂದ, ಜಮಾಅತಿನ ಇತರ ಗ್ರಂಥಗಳಿಂದ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇತರ ಗ್ರಂಥಗಳಿಂದ, ಅಲ್‌ಫಝಲ್ ಪತ್ರಿಕೆಯಿಂದ, ಅಲ್‌ಹಕಮ್ ಪತ್ರಿಕೆಯಿಂದ ಅಥವಾ ಬೇರೆ ಪುಸ್ತಕಗಳಿಂದಲೂ ಯಾವುದಾದರೂ ಉದ್ಧರಣಿಗಳನ್ನು ಓದಿ ಖುತ್‌ಬ ನೀಡಬಹುದು. ಮನೆಯಲ್ಲಿರುವ ಪ್ರಾಪ್ತ ವಯಸ್ಕನಾದ ಬಾಲಕ ಅಥವಾ ಪುರುಷ ಜುಮುಅ ಖುತ್‌ಬ ನೀಡಿ ನಮಾಝ್ ನಿರ್ವಹಿಸಬಹುದು. ಜುಮುಅ ನಮಾಝ್ ದೀರ್ಘ ಕಾಲ ನಿರ್ವಹಿಸದಿರಲು ಸಾಧ್ಯವಿಲ್ಲ. ಮನೆಯಲ್ಲಿ ಜುಮುಅ ನಮಾಝ್ ನಿರ್ವಹಿಸಲು ಅದಕ್ಕೋಸ್ಕರ ಸಿದ್ಧತೆಗಳನ್ನು ಮಾಡುವರು. ಅವರು ಪುಸ್ತಕಗಳನ್ನು ಓದುವರು ಮತ್ತು ಜ್ಞಾನ ವೃದ್ಧಿಯಾಗುವುದು. ಈ ರೀತಿ ಸರಕಾರದ ನಿರ್ಬಂಧ ಪ್ರಕಾರ ಮನೆಯಲ್ಲಿ ಕುಳಿತುಕೊಳ್ಳುವುದು ಸಹ ಧಾರ್ಮಿಕ ಮತ್ತು ಆಧ್ಯಾತ್ಮಿಕವಾಗಿ ಲಾಭಕರವಾಗುವುದು. ಜ್ಞಾನವರ್ಧನೆಗೆ ಕಾರಣವಾಗುವುದು.

ಈಗ ಅಲ್‌ಹಕಮ್ ಪತ್ರಿಕೆಯು "ನಾವು ಮನೆಯಲ್ಲಿ ಈ ಬಿಡುವು ಸಮಯವನ್ನು ಹೇಗೆ ವಿನಿಯೋಗಿಸುತ್ತೇವೆ" ಎಂಬ ಶೀರ್ಷಿಕೆಯಲ್ಲಿ ಜನರ ಹೇಳಿಕೆಗಳನ್ನು ಪ್ರಕಟಿಸಲು ತೊಡಗಿದೆ. ಬಹುತೇಕ ಜನರು ಹೇಳುತ್ತಾರೆ: ಪವಿತ್ರ ಖುರ್‌ಆನ್, ಹದೀಸ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳು ಮತ್ತು ಜಮಾಅತಿನ ಇತರ ಸಾಹಿತ್ಯಗಳನ್ನು ಓದಿ ನಾವು ನಮ್ಮ ಜ್ಞಾನವನ್ನು ಅಭಿವೃದ್ಧಿಗೊಳಿಸುತ್ತಿದ್ದೇವೆ ಎಂದು. ಸಾಮೂಹಿಕ ಮಾಧ್ಯಮಗಳಲ್ಲಿಯೂ ಲೌಕಿಕ ಜನರು ಸಹ ಹೇಳುತ್ತಿದ್ದಾರೆ – ನಮಗೆ ನಮ್ಮ ಗಾರ್ಹಿಕ ಜೀವಿತವನ್ನು ಉತ್ತಮ ಪಡಿಸಲು ಸಂದರ್ಭ ಸಿಗುತ್ತದೆ, ನಮ್ಮ ಮನೆಯ ಜೀವಿತ ಶೈಲಿ ಮರಳಿ ಬರುತ್ತಿದೆ ಎಂದು.

ಆದುದರಿಂದ ನಾವು ನಮ್ಮ ಗಾರ್ಹಿಕ ಜೀವಿತವನ್ನು ಉತ್ತಮಪಡಿಸಲು ಮತ್ತು ಮಕ್ಕಳಿಗೆ ಉತ್ತಮ ತರಬೇತಿ ನೀಡಲು ಸಮಯವನ್ನು ವಿನಿಯೋಗಿಸಲು ಪ್ರಯತ್ನಿಸಬೇಕು. ಎಂ.ಟಿ.ಎ.ದಲ್ಲಿ ಬಹಳ ಉತ್ತಮ ಕಾರ್ಯಕ್ರಮಗಳು ಬರುತ್ತಾ ಇವೆ. ಆ ಕಾರ್ಯಕ್ರಮಗಳನ್ನು ಒಟ್ಟಿಗೆ ಕುಳಿತು ನೋಡಲು ಪ್ರಯತ್ನಿಸಿರಿ. ಅದಲ್ಲದೆ ಸರಕಾರ ಜನರ ಹಿತಕ್ಕೋಸ್ಕರ, ಎಂದರೆ ನಿಮ್ಮ ಆರೋಗ್ಯ ಕಾಪಾಡಲು ನೀಡಿದ ಮಾರ್ಗದರ್ಶನಗಳನ್ನು ಮತ್ತು ಜಾರಿಗೊಳಿಸಿದ ನಿಯಮಗಳನ್ನು ಪೂರ್ಣವಾಗಿ ಬದ್ಧತೆಯಿಂದ ಪಾಲಿಸಿರಿ. ನಾನು ಹಿಂದಿನ ಖುತ್‌ಬಗಳಲ್ಲಿ ಹೇಳಿದ ಹಾಗೆ ಎಲ್ಲವುಗಳಿಗಿಂತ ಮಿಗಿಲಾಗಿ ಪ್ರಾರ್ಥನೆ ಮಾಡುವ ಬಗ್ಗೆ ಬಹಳ ಗಮನ ಹರಿಸಿರಿ. ಪ್ರಾರ್ಥನೆಗಳ ಮೂಲಕ ನಾವು ಅಲ್ಲಾಹನ ಅನುಗ್ರಹಗಳನ್ನು ಹೀರಿಕೊಳ್ಳಬಹುದಾಗಿದೆ. ನಮ್ಮ ಶಾರೀರಿಕ ಮತ್ತು ಆಧ್ಯಾತ್ಮಿಕ ಸ್ಥಿತಿಯನ್ನು ಆರೋಗ್ಯ ಭರಿತವನ್ನಾಗಿ ಮಾಡಬಹುದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ಪದೇ ಪದೇ ಇದನ್ನೇ ಉಪದೇಶಿಸಿದ್ದಾರೆ. ಇಂತಹ ಪರಿಸ್ಥಿತಿಗಳಲ್ಲಿಯೂ ಹೀಗೆ ಉಪದೇಶಿಸಿದ್ದಾರೆ: ಎಲ್ಲದಕ್ಕಿಂತ ಆವಶ್ಯಕರವಾದ ವಿಷಯ, ಸರ್ವಶಕ್ತನಾದ ಅಲ್ಲಾಹನಿಂದ ಪಾಪದೋಷಗಳ ಬಗ್ಗೆ ಕ್ಷಮೆಯನ್ನು ಯಾಚಿಸುವುದಾಗಿದೆ. ಹೃದಯವನ್ನು ಶುದ್ಧೀಕರಿಸಿರಿ. ಸತ್ಕರ್ಮ ನಿರತರಾಗಿರಿ. ಅಲ್ಲಾಹನು ನಮಗೆ ದುಆ ಎಂಬ ಬಹಳ ದೊಡ್ಡ ಆಯುಧ ನೀಡಿದ್ದಾನೆ. ಅದರ ಮೂಲಕ ಅಲ್ಲಾಹನ ಆಶ್ರಯ ಪಡೆಯಲು ನಾವು ಪ್ರಯತ್ನಿಸಬೇಕು ಮತ್ತು ಅದರ ಬಗ್ಗೆ ಶ್ರದ್ಧೆ ಹರಿಸಬೇಕು.

ಜುಮುಅ ನಮಾಝ್ ನಿರ್ವಹಿಸದಿರುವ ಪ್ರಶ್ನೆ ಬಗ್ಗೆ ಹೇಳುವುದಾದರೆ, ಕೆಲವು ಪರಿಸ್ಥಿತಿಗಳಲ್ಲಿ ಬಾಜಮಾಅತ್ ನಮಾಝ್ ಮತ್ತು ಜುಮುಅ ನಮಾಝ್ ಬಿಟ್ಟುಬಿಡಬಹುದೆಂದು ಕೆಲವು ಹದೀಸುಗಳಿಂದ ಸಾಬೀತಾಗುತ್ತದೆ. ಬುಖಾರಿಯ ಒಂದು ಹದೀಸಿನಲ್ಲಿ ಹೀಗೆ ಹೇಳಲಾಗಿದೆ: ಮಳೆ ಸುರಿಯುತ್ತಿದ್ದಾಗ ಹಝ್ರತ್ ಇಬ್ನು ಅಬ್ಬಾಸ್ ತನ್ನ ಅಝಾನ್ ಕರೆ ನೀಡುವವನೊಂದಿಗೆ ಹೇಳಿದರು: ಅಶ್‌ಹದು ಅಲ್ಲಾಇಲಾಹ ಇಲ್ಲಲ್ಲಾಹ್ ಅಶ್‌ಹದು ಅನ್ನ ಮುಹಮ್ಮದುರ್ರಸೂಲುಲ್ಲಾಹ್ ಎಂದು ಹೇಳಿದ ನಂತರ ಹಯ್ಯಅಲಸ್ಸಲಾತ್

ಎಂದು ಹೇಳದೆ ಅದರ ಬದಲು ಸಲ್ಲೂ ಅಲಾ ಬುಯೂತಿಕುಮ್ ನಿಮ್ಮ ಮನೆಗಳಲ್ಲಿ ನಮಾಝ್ ಮಾಡಿರಿ ಎಂದು ಹೇಳಬೇಕು. ಆಗ ಜನರಿಗೆ ಆಶ್ಚರ್ಯವಾಯಿತು. ಅವರಿಗೆ ಅದು ಹೊಸದಾಗಿ ತೋರಿತು. ಆಗ ಹಝ್ರತ್ ಇಬ್ನು ಅಬ್ಬಾಸ್ ಹೇಳಿದರು: ನನಗಿಂತ ಶ್ರೇಷ್ಠರಾಗಿದ್ದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆಯೇ ವರ್ತಿಸಿದ್ದರು. ಜುಮುಅ ನಮಾಝ್ ನಿರ್ವಹಿಸುವುದು ಆವಶ್ಯಕವಾಗಿದ್ದರೂ ನಿಮ್ಮನ್ನು ಕಷ್ಟಕ್ಕೆ ಗುರಿಪಡಿಸಿ ನೀವು ಕೆಸರಿನಲ್ಲಿ ಜಾರಿಕೊಂಡು ನಡೆಯುವುದನ್ನು ನಾನು ಇಷ್ಟಪಡುವುದಿಲ್ಲ ಎಂದು ಹೇಳಿದರು. ಮುಸ್ಲಿಮ್ ಹದೀಸ್ ಗ್ರಂಥದಲ್ಲಿಯೂ ಈ ಹದೀಸು ವರದಿಯಾಗಿದೆ. ಹಝ್ರತ್ ಇಬ್ನು ಅಬ್ಬಾಸ್ ಮಳೆ ಸುರಿಯುತ್ತಿದ್ದ ದಿನ ಅಝಾನ್ ಕರೆ ನೀಡುವವನೊಂದಿಗೆ ಹೇಳಿದರು: **ಅಶ್‌ಹದು ಅಲ್ಲಾಇಲಾಹ ಇಲ್ಲಲ್ಲಾಹ್ ಅಶ್‌ಹದು ಅನ್ನ ಮುಹಮ್ಮದುರ್ರಸೂಲುಲ್ಲಾಹ್** ಉಚ್ಚರಿಸಿದ ಬಳಿಕ ಹಯ್ಯಅಲಸ್ಸಲಾ ಎಂದು ಹೇಳಬೇಡ ಸಲ್ಲೂ ಅಲಾ ಬುಯೂತಿಕುಮ್ ಎಂದು ಹೇಳು. ವರದಿಗಾರ ಹೇಳುತ್ತಾರೆ: ಜನರಿಗೆ ಇದು ಹೊಸದಾಗಿ ಕಾಣಿಸಿತು. ಆಗ ಇಬ್ನು ಅಬ್ಬಾಸ್ ಹೇಳಿದರು: ನೀವು ಯಾಕೆ ಇದರ ಬಗ್ಗೆ ಆಶ್ಚರ್ಯ ಪಡುತ್ತೀರಿ. ನನಗಿಂತ ಶ್ರೇಷ್ಠರಾಗಿದ್ದವರು ಈ ರೀತಿ ಮಾಡಿದ್ದರು. ಜುಮುಅ ನಮಾಝ್ ನಿರ್ವಹಿಸುವುದು ಆವಶ್ಯಕವಾಗಿದ್ದರೂ ನೀವು ಕೆಸರಿನಲ್ಲಿ ಜಾರಿಕೊಂಡು ನಡೆದು ಬರುವುದನ್ನು ನಾನು ಇಷ್ಟಪಡುವುದಿಲ್ಲ.

ಅಲ್ಲಾಮ ಇಮಾಂ ನವವಿ ಈ ಹದೀಸಿಗೆ ವ್ಯಾಖ್ಯಾನ ಬರೆಯುತ್ತಾ ಹೇಳುತ್ತಾರೆ: ಮಳೆ ಮೊದಲಾದವುಗಳ ಕಾರಣದಿಂದ ಜುಮುಅ ನಮಾಝುನ್ನು ಸ್ಥಗಿತಗೊಳಿಸುವ ಬಗ್ಗೆ ಸಾಕ್ಷ್ಯಾಧಾರ ಈ ಹದೀಸಿನಲ್ಲಿದೆ. ನಮ್ಮ ಅಭಿಪ್ರಾಯ ಸಹ ಇದೇ ಆಗಿದೆ. ಇತರ ಕರ್ಮಶಾಸ್ತ್ರ ಪಂಡಿತರು (ಫುಖಹಾ) ಇದೇ ಅಭಿಪ್ರಾಯ ಹೊಂದಿದ್ದಾರೆ. ಆದರೆ ಇಮಾಮ್ ಮಾಲಿಕ್ ಇದಕ್ಕೆ ವಿರುದ್ಧ ಅಭಿಪ್ರಾಯ ಹೊಂದಿದ್ದಾರೆ. ವಲ್ಲಾಹು ಅಅ್‌ಲಮು ಬಿಸ್ಸವಾಬ್. ಅಲ್ಲಾಹನಿಗೆ ಮಾತ್ರ ಚೆನ್ನಾಗಿ ತಿಳಿದಿದೆ.

ಇದೇ ರೀತಿ ಕರ್ಮಶಾಸ್ತ್ರ ಪಂಡಿತರು ಬಾಜಮಾಅತ್ ನಮಾಝ್ ಮತ್ತು ಜುಮುಅ ತ್ಯಜಿಸುವ ಕಾರಣವಾಗಿ ಮಸ್‌ಜಿದ್‌ಗೆ ಬರಲು ಸಾದ್ಯವಾಗದಷ್ಟು ರೋಗ ಪೀಡಿತನಾಗುವುದನ್ನು ಸೇರಿಸಿದ್ದಾರೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ – ನಿಮಗೆ ಧರ್ಮದಲ್ಲಿ ಯಾವುದೇ ಸಂಕಷ್ಟವನ್ನು ಇರಿಸಿಲ್ಲ ಎಂಬುದನ್ನು ಇದಕ್ಕೆ ಸಾಕ್ಷ್ಯಾಧಾರವಾಗಿ ಅವರು ಉಲ್ಲೇಖಿಸಿದ್ದಾರೆ. ಇದೇ ಕಾರಣದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರೋಗ ಬಾಧಿತರಾಗಿದ್ದಾಗ ಮಸ್‌ಜಿದ್‌ಗೆ ಹೋಗುವುದನ್ನು ನಿಲ್ಲಿಸಿದರು ಮತ್ತು ಹಝ್ರತ್ ಅಬೂಬಕರ್‌ರೊಂದಿಗೆ ನಮಾಝ್‌ಗಳ ಇಮಾಮತ್ ನಿರ್ವಹಿಸಲು ಹೇಳಿದರು. ಸಹೀಹ್ ಬುಖಾರಿಯಲ್ಲಿಯೂ ಸಹೀಹ್ ಮುಸ್ಲಿಮ್‌ನಲ್ಲಿಯೂ ಈ ಹದೀಸು ವರದಿಯಾಗಿದೆ. ಅದೇ ರೀತಿ ಯಾವುದಾದರೂ ರೋಗ ಬಾಧೆಯುಂಟಾಗುವ ಭಯವನ್ನು ಸಹ ಮಸ್‌ಜಿದ್‌ಗೆ ಹೋಗದಿರಲು ಕಾರಣವಾಗಿ ಸೂಚಿಸಲಾಗಿದೆ. ಇದಕ್ಕೆ ಸಾಕ್ಷ್ಯಾಧಾರ ಹಝ್ರತ್ ಇಬ್ನು ಅಬ್ಬಾಸರ ಈ ಹದೀಸ್ ಆಗಿದೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಸ್‌ಜಿದ್‌ಗೆ ಹೋಗದಿರಲು ಕಾರಣವನ್ನು ವ್ಯಾಖ್ಯಾನಿಸುತ್ತಾ ಅದು ಭಯ ಮತ್ತು ರೋಗ ಎಂದು ಹೇಳಿದ್ದಾರೆ. ಈ ಹದೀಸು ಸುನನ್ ಅಬೂ ದಾವೂದ್‌ನಲ್ಲಿ ವರದಿಯಾಗಿದೆ.

ಒಟ್ಟಾರೆ ಹೇಳುವುದಾದರೆ, ಈ ರೋಗ ಸಾಂಕ್ರಾಮಿಕವಾಗಿ ಹರಡುವ ಭಯವಿದೆ. ಸರಕಾರ ಸಹ ಇದರ ಬಗ್ಗೆ ಕೆಲವು ಕಾನೂನು ಕಾಯಿದೆಗಳನ್ನು ಜಾರಿಗೊಳಿಸಿದೆ. ದೇಶದ ನಿಯಮಗಳನ್ನು ಪಾಲಿಸುವುದು ಆವಶ್ಯಕವಾಗಿದೆ. ಈ ಕಾರಣದಿಂದ ಒಂದು ಸ್ಥಳದಲ್ಲಿ ಒಟ್ಟು ಸೇರುವುದು, ಬಾಜಮಾಅತ್ ನಮಾಝ್ ನಿರ್ವಹಿಸುವುದು ಅಥವಾ ಜುಮುಅ ನಮಾಝ್ ನಿರ್ವಹಿಸುವುದು ಅಸಾಧ್ಯವಾಗಿದೆ. ಆದರೆ ನಾನು ಇದರ ಮೊದಲು ಹೇಳಿದ ಹಾಗೆ ಮನೆಗಳಲ್ಲಿ ಬಾಜಮಾಅತ್ ನಮಾಝ್ ಅನುಷ್ಠಿಸುವ ರೂಢಿ ಮಾಡಿಕೊಳ್ಳಿರಿ. ಆ ಮೂಲಕ ಮಕ್ಕಳಿಗೆ ನಮಾಝ್ ಮತ್ತು ಬಾಜಮಾಅತ್ ನಮಾಝ್ ನಿರ್ವಹಿಸುವ ಆವಶ್ಯಕತೆ ಇದೆ ಎಂಬುದರ ಬಗ್ಗೆ ಮನವರಿಕೆ ಆಗುವುದು. ಇಂದಿನ ಪರಿಸ್ಥಿತಿಯಲ್ಲಿ ನಮಗೆ ಮಸ್‌ಜಿದ್‌ಗೆ ಹೋಗಲು ಸಾಧ್ಯವಿಲ್ಲ. ಆದರೆ ನಾವು ಈ ಫರ್ಝ್ ಕೃತ್ಯವನ್ನು ನಮ್ಮ ಮನೆಗಳಲ್ಲಿ ನಿರ್ವಹಿಸುವುದು ಆವಶ್ಯಕವಾಗಿದೆ ಎಂದು ಅವರು ಮನವರಿಕೆ ಮಾಡಿಕೊಳ್ಳುವರು. ಇದರ ಬಗ್ಗೆ ವಿಶಿಷ್ಟವಾಗಿ ಗಮನ ಹರಿಸಿರಿ.

ಪ್ರಯಾಣ ಮಾಡುತ್ತಿದ್ದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೂ ಇಂತಹ ಸ್ಥಿತಿ ತಲೆದೋರಿತ್ತು. ಆಗ ಅವರು ಜುಮುಅ ನಿರ್ವಹಿಸಿರಲಿಲ್ಲ. ಅನೇಕ ವರದಿಗಳಿವೆ, ಅವುಗಳು ಈ ವಿಷಯ ವಿಶದೀಕರಿಸುತ್ತಿವೆ. ಸಾಂಕ್ರಾಮಿಕ ರೋಗದ ಕಾಲದಲ್ಲಿ ಜಮಾಯಿಸುವುದು ಮತ್ತು ಒಬ್ಬರಿನ್ನೊಬ್ಬರನ್ನು ಭೇಟಿಯಾಗುವುದು ಸರಿಯಲ್ಲ ಎಂದು ವರದಿಯಾಗಿದೆ. ರೋಗಿಗಳನ್ನು ಬೇರೆಯಾಗಿರಿಸಬೇಕು. ನಾನು ಇದರ ಮೊದಲು ಹೇಳಿದ ಹಾಗೆ ನಾವು ಸ್ಥಿರವಾಗಿ ಜುಮುಅ ನಮಾಝ್ ಬಿಟ್ಟುಬಿಡುವುದಿಲ್ಲ. ನಾವು ಅದರ ಬಗ್ಗೆ ಬದಲಿ ವ್ಯವಸ್ಥೆ ಮಾಡುತ್ತಿದ್ದೇವೆ. ಮನೆಗಳಲ್ಲಿ ಜುಮುಅ ನಿರ್ವಹಿಸುವೆವು. ನಾನು ಸಹ ಅದರ ಬಗ್ಗೆ ವ್ಯವಸ್ಥೆ ಮಾಡುವೆನು.

ಈಗ ದುಆ ಮಾಡುವುದು ಆವಶ್ಯಕವಾಗಿದೆ. ಅಲ್ಲಾಹನು ಅನುಗ್ರಹ ನೀಡಲಿ ಎಂದು ಪ್ರಾರ್ಥಿಸಿರಿ. ಅಲ್ಲಾಹನು ಈ ಮಹಾಮಾರಿಯಿಂದ ಲೋಕವನ್ನು ಬೇಗನೆ ಮುಕ್ತವನ್ನಾಗಿ ಮಾಡಲಿ. ಲೋಕದ ಜನರನ್ನು ಮಾನವೀಯತೆಯ ಆವಶ್ಯಕತೆಗಳನ್ನು ಈಡೇರಿಸುವವರನ್ನಾಗಿ ಮಾಡಲಿ. ಅವರೆಲ್ಲರೂ ಸೃಷ್ಟಿಕರ್ತನಾದ ದೇವನನ್ನು ಗುರುತಿಸುವವರಾಗಲಿ. ಅಲ್ಲಾಹನು ನಮಗೆಲ್ಲರಿಗೂ ಅಂತಹ ಭಾಗ್ಯ ದಯಪಾಲಿಸಲಿ – ಆಮೀನ್.

**ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹೂ.**

## ಸೂಚನೆ

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**
**Mob or whatsapp: 8050330779**


## M.Sc Physics, B.Ed ಶಿಕ್ಷಕರು ಬೇಕಾಗಿದ್ದಾರೆ

ಸದರ್ ಅಂಜುಮನ್ ಅಹ್ಮದಿಯ ಖಾದಿಯಾನ್ ಅಡಿಯಲ್ಲಿ ನಝಾರತ್ ತಾಲೀಮ್‌ನಲ್ಲಿ ಒಂದು ಹುದ್ದೆ ತುಂಬಬೇಕಾಗಿರುವುದು. ಆಸಕ್ತಿವುಳ್ಳ ಅಭ್ಯರ್ಥಿಗಳು ಕೆಳಕಂಡ ವಿವರಗಳೊಂದಿಗೆ ಅರ್ಜಿ ಸಲ್ಲಿಸಬಹುದೆಂದು ತಮ್ಮ ಗಮನಕ್ಕರ ತರಲಾಗುತ್ತದೆ.

**ವಿವರಗಳು (ಶರತ್ತುಗಳು)**

- ಅಭ್ಯರ್ಥಿಯ ಶೈಕ್ಷಣಿಕ ಅರ್ಹತೆಯು UGC ಯಿಂದ ಮಾನ್ಯತೆಪಡೆದ ಯಾವುದೇ ವಿಶ್ವವಿದ್ಯಾಲಯದಿಂದ M.Sc Physics, B.Ed. ಶೇ50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.
- ಯಾವುದೇ Secondary classನಲ್ಲಿ ಕನಿಷ್ಠ 2 ವರ್ಷದವರೆಗೆ Physics ಬೋಧಿಸುವ ಅನುಭವ ಹೊಂದಿರಬೇಕು.
- ಅಭ್ಯರ್ಥಿಯ ವಯಸ್ಸು 22 ರಿಂದ 37 ವರ್ಷ ನಡುವೆ ಅಗಿರಬೇಕು.
- ಕೇಂದ್ರ ಆಯ್ಕೆ ಸಮಿತಿಯಿಂದ ಆಯೋಜಿತ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣ ಅಭ್ಯರ್ಥಿಯನ್ನೇ ಸಂದರ್ಶನಕ್ಕೆ ಕರೆಯಲಾಗುವುದು.
- ಲಿಖಿತ ಮತ್ತು ಮೂಖಿಕ ಸಂದರ್ಶನದಲ್ಲಿ ಉತ್ತೀರ್ಣಗೊಂಡ ಅಭ್ಯರ್ಥಿಯನ್ನು ನೂರ್ ಆಸ್ಪತ್ರೆ ಖಾದಿಯಾನ್ ಜಾರಿಗೊಳಿಸಿದ Medical fitness certificate ಪ್ರಸ್ತುತಪಡಿಸಬೇಕಾಗುವುದು.
- ಸಂದರ್ಶನಕ್ಕೆ ಹಾಜರಾಗುವ ಅಭ್ಯಥಿ ಖಾದಿಯಾನಗೆ ಹೋಗಿ ಬರುವ ಮತ್ತು ವೈದ್ಯಕೀಯ ಎಲ್ಲಾ ಖರ್ಚು ಸ್ವಯಂ ಭರಿಸಬೇಕಾಗುವುದು.
- ಆಯ್ಕೆಗೊಂಡ ನಂತರ ಖಾದಿಯಾನಿನಲ್ಲಿ ವಸತಿ ವ್ಯವಸ್ಥೆಯು ತಾನೇ ನೋಡಿಕೊಳ್ಳಬೇಕಾಗುವುದು.
- ಬದರ್ ವಾರ ಪತ್ರಿಕೆಯಲ್ಲಿ ಪ್ರಕಟಣೆ ನೀಡಿದ ಎರಡು ತಿಂಗಳ ನಂತರ ಪರೀಕ್ಷೆಯ ದಿನಾಂಕ ಸೂಚಿಸಲಾಗುವುದು.
- ಪ್ರಸ್ತುತ ಹುದ್ದೆಗೆ ಬೇಕಾದ ಅರ್ಜಿಯ ನಮೂನೆಗಳು ನಝಾರತ್ ದಿವಾನ್ ಖಾದಿಯಾನ್ ಮೂಲಕ ಪಡೆಯಬಹುದಾಗಿದೆ. ಅರ್ಜಿ ಪೂರ್ಣ ರೀತಿಯಲ್ಲಿ ತುಂಬಿಸಿ ಕೊಟ್ಟ ನಂತರ ಕಯಿದೆ ಅನ್ವಯ ಕ್ರಮಕೈಗೊಳ್ಳಲಾಗುವುದು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:** ನಝಾರತ್ ದಿವಾನ್ ಸದರ್ ಅಂಜುಮನ್ ಅಹ್ಮದಿಯ ಖಾದಿಯಾನ್
E-mail: diwan@qadian.in
01872-501130, 9646351280, 9464066686

# ಜುಮುಅ ಖುತ್‌ಬ

**"ಯಾರು ಶಹೀದರನ್ನು ಓಡಾಡುತ್ತಿರುವುದನ್ನು ಕಾಣಲು ಬಯಸುವರೋ ಅವರು ತಲ್‌ಹ ಬಿನ್ ಉಬೈದುಲ್ಲಾರವರನ್ನು ನೋಡಿಕೊಳ್ಳಿರಿ"**

**ಪ್ರವಾದಿ ಮುಹಮ್ಮದ್(ಸ) ಅವರಿಂದ ಫಯ್ಯಾಝ್ ಎಂಬ ಬಿರುದು ಗಳಿಸಿದ, ತಮ್ಮ ಜೀವಿತಕಾಲದಲ್ಲಿ ಸ್ವರ್ಗವನ್ನು ಗಳಿಸುವರು ಎಂದು ಸುವಾರ್ತೆ ಪಡೆದವರು,**
**ಉಹುದ್ ಯುದ್ಧದಲ್ಲಿ ರಸೂಲುಲ್ಲಾಹ್(ಸ) ಅವರನ್ನು ಸಂರಕ್ಷಿಸುವಲ್ಲಿ ತಮ್ಮ ಕೈಯನ್ನು ಜೋಮುಗೊಳಿಸಿಕೊಂಡ,**
**"ಮನ್ ಕಝಾ ಸಹ್‌ಬುಹೂ" ಎಂಬ ವಚನ ಅನ್ವಯಿಸುವ ವ್ಯಕ್ತಿ,**
**ಹಝ್ರತ್ ಉಮರ್[ರ] ಸ್ಥಾಪಿಸಿದ ಆರು ಜನರ ಶೂರಾ (ಸಲಹೆಗಾರ) ಸಮಿತಿಯ ಸದಸ್ಯರಾದ,**
**ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಮುಸ್‌ಅಬ್ ಬಿನ್ ಉಮೈರ್‌ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಇಂದು ಹರಡಿರುವ ಸಾಂಕ್ರಮಿಕ ರೋಗ ಕೊರೋನದಿಂದ ಸ್ವತಃ ಉಳಿದಿರಲು ಹಾಗೂ ಬೇರೆಯವರನ್ನೂ ಸಹ ಉಳಿಸಲು ಸಂರಕ್ಷಣಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲು ಹಾಗೂ ದುಆ ಮಾಡುತ್ತಿರುವುದಕ್ಕೆ ಉಪದೇಶಗಳು**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **13–03–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇಂದು ನಾನು ಪ್ರಸ್ತಾಪಿಸಲಿರುವ ಬದರಿ ಸಹಾಬಿಯ ಹೆಸರು ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾ[ರ]. ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾ[ರ] ರವರ ಸಂಬಂಧ ಬನೂ ತೈಮ್ ಬಿನ್ ಮುರ್ರ ಗೋತ್ರದಿಂದಿತ್ತು. ಅವರ ತಂದೆಯ ಹೆಸರು ಉಬೈದುಲ್ಲಾ ಬಿನ್ ಉಸ್ಮಾನ್ ಮತ್ತು ತಾಯಿಯ ಹೆಸರು ಸಅ್‌ಬ ಎಂದಾಗಿತ್ತು. ಅವರು ಸಬ್ದುಲ್ಲಾ ಬಿನ್ ಇಮಾದ್ ಹಝ್ರಮಿ ಅವರ ಪುತ್ರಿ ಆಗಿದ್ದರು ಮತ್ತು ಹಝ್ರತ್ ಅಲಾ ಬಿನ್ ಹಝ್ರಮಿ ಅವರ ಸಹೋದರಿ ಆಗಿದ್ದರು. ಹಝ್ರತ್ ತಲ್‌ಹರವರ ಉಪನಾಮ ಅಬೂ ಮುಹಮ್ಮದ್ ಎಂದಾಗಿತ್ತು. ಹಝ್ರತ್ ಅಲಾ ಬಿನ್ ಹಝ್ರಮಿ ಅವರ ತಂದೆಯ ಹೆಸರು ಅಬ್ದುಲ್ಲಾ ಬಿನ್ ಇಮಾದ್ ಹಝ್ರಮಿ ಎಂದಾಗಿತ್ತು. ಹಝ್ರತ್ ಅಲಾರವರ ಸಂಬಂಧ ಹಝುರ್‌ಮೌತ್‌ದಿಂದ ಇತ್ತು ಮತ್ತು ಹರಬ್ ಬಿನ್ ಉಮಯ್ಯರವರ ಪ್ರತಿಜ್ಞಾಬದ್ಧರಾಗಿದ್ದರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅವರನ್ನು ಬಹ್‌ರೈನ್‌ನ ಉತ್ತರಧಿಕಾರಿಯನ್ನಾಗಿ ನೇಮಿಸಿದ್ದರು. ಇವರು ಮೃತರಾಗುವ ತನಕ ಬಹ್‌ರೈನ್‌ನ ಅಧಿಕಾರಿ ಆಗಿದ್ದರು. ಅವರು 14 ಹಿಜರಿಯಲ್ಲಿ ಹಝ್ರತ್ ಉಮರ್[ರ] ಅವರ ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು. ಅವರ ಓರ್ವ ಸಹೋದರ ಆಮಿರ್ ಬಿನ್ ಹಝ್ರಮಿ ಬದರ್ ದಿವಸ ಕುಫರ್ ಪರಿಸ್ಥಿತಿಯಲ್ಲಿ ಮರಣ ಹೊಂದಿದನು. ಮತ್ತು ಮೊದಲನೇಯ ಬಾರಿಗೆ ಅವನ ಸಂಪತ್ತನ್ನು ಖುಮ್‌ಸ್ ಆಗಿ ಇಸ್ಲಾಮ್‌ನಲ್ಲಿ ತರಲಾಯಿತು. (ಅತ್ತಬ ಖಾತುಲ್ ಕುಬ್ರ ಸಂಪುಟ–3, ಪುಟ–160, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990, ಉಸದುಲ್ ಗಾಬ ಸಂಪುಟ–4, ಪುಟ–71, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2008)

ಅವರ ವಂಶಾವಳಿ ಏಳನೆ ತಲೆಮಾರಿನಲ್ಲಿ ಮುರ್ರತ್ ಬಿನ್ ಕಅಬ್‌ರಿಗೆ ತಲಪುವಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸೇರುತ್ತದೆ. ನಾಲ್ಕನೆಯ ತಲೆಮಾರಿನಲ್ಲಿ ಹಝ್ರತ್ ಅಬೂಬಕರ್[ರ] ರೊಂದಿಗೂ ಸೇರುತ್ತದೆ. ಅವರ ಪಿತ ಉಬೈದುಲ್ಲಾ ಇಸ್ಲಾಮ್ ಧರ್ಮದ ಕಾಲದಲ್ಲಿ ಜೀವಿಸಿರಲಿಲ್ಲ. ಆದರೆ ಅವರ ತಾಯಿ ದೀರ್ಘಾಯುಸ್ಸು ಪಡೆದರು. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿ ಸಹಾಬಿಯ ಪದವಿ ಗಳಿಸಿದರು. ಹಿಜ್‌ರತ್‌ಗೆ ಮೊದಲೇ ಆಕೆ ಮುಸ್ಲಿಮಳಾಗಿದ್ದರು. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್ ಸಾಹೆಬ್ ಸಂಪುಟ–2, ಪುಟ–128)

ಹಝ್ರತ್ ತಲ್‌ಹ ಬದರ್ ಯುದ್ಧದಲ್ಲಿ ಭಾಗವಹಿಸಿರಲಿಲ್ಲವಾದರೂ ಅವರಿಗೆ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಗನೀಮತ್ ಸಂಪತ್ತಿನಿಂದ ಪಾಲು ನೀಡಿದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸದ ಕಾರಣ ಹೀಗೆ ವಿವರಿಸಲಾಗಿದೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಖುರೈಶರ ತಂಡವನ್ನು ಸೀರಿಯಕ್ಕೆ ಕಳುಹಿಸಬೇಕು ಎಂದು ಯೋಚಿಸಿದಾಗ ಅವರು ಹೊರಡುವುದಕ್ಕಿಂತ 10 ದಿವಸ ಮೊದಲು ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾ[ರ] ಮತ್ತು ಹಝ್ರತ್ ಸಯೀದ್ ಬಿನ್ ಝೈದ್[ರ] ಅವರನ್ನು ತಂಡದ ಸಂಚಾರ ತಿಳಿಸುವುದಕ್ಕೆ ಕಳುಹಿಸಿದ್ದರು. ಇವರಿಬ್ಬರು ಅಲ್ಲಿಂದ ಹೊರಟು ಅಹ್‌ಮದ್ ಸಮುದ್ರದ ದಡದ ಒಂದು ಸ್ಥಳವಾದ **ಹೌರ** ಎಂಬಲ್ಲಿಗೆ ತಲುಪಿದರು ಅ ಸ್ಥಳದಲ್ಲಿ ಹಜಾಝ್ ಮತ್ತು ಸೀರಿಯಾದ ಯಾತ್ರಿಕರ ತಂಡಗಳು ಮುಂದುವರಿಯುತ್ತಿದ್ದವು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ತಲ್‌ಹ[ರ] ಹಾಗೂ ಹಝ್ರತ್ ಸಯೀದ್[ರ] ಅವರಿಬ್ಬರು ಹಿಂದಿರುಗಿ ಬರುವುದಕ್ಕೆ ಮುಂಚೆಯೇ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಈ ಮಾತು ತಿಳಿದು ಬಂದಿತು. ಆದ್ದರಿಂದ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ತಮ್ಮ ಎಲ್ಲಾ ಸಂಗಡಿಗರನ್ನು ಕರೆಸಿ ಖುರೈಶರ ತಂಡವನ್ನು ಪಡೆಯುವುದಕ್ಕೆ ಹೊಟರು. ಆದರೆ ಆ ತಂಡವು ಬೇರೊಂದು ಮಾರ್ಗದಿಂದ ಅಂದರೆ ಕರಾವಳಿ ಪ್ರದೇಶದಿಂದ ವೇಗವಾಗಿ ಹೊರಟಿತ್ತು. ಇದರ ಬಗ್ಗೆ ಇದಕ್ಕೂ ಮುಂಚೆ ವಿವರಿಸಲಾಗಿದೆ. ಮತ್ತು ಯಾತ್ರಿಕರ ತಂಡವು ಹುಡುಕಾಡುತ್ತಿರುವ ತಂಡಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಹಗಲೂ ರಾತ್ರಿ ಪ್ರಯಾಣಿಸುತ್ತಿದ್ದರು. ಈ ವಿರೋಧಿಗಳ ತಂಡವು ಮಕ್ಕದವರದ್ದಾಗಿತ್ತು. ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾ[ರ] ಹಾಗೂ ಹಝ್ರತ್ ಸಯೀದ್ ಬಿನ್ ಝೈದ್[ರ] ಇವರಿಬ್ಬರು ಮದೀನಕ್ಕೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಈ ಸುದ್ದಿ ತಿಳಿಸಬೇಕೆಂದು ಹೊರಟಿತ್ತು. ಅವರಿಬ್ಬರಿಗೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಬದರ್ ಯುದ್ಧಕ್ಕೆ ಹೋರಟಿರುವುದರ ಬಗ್ಗೆ ತಿಳಿದಿರಲಿಲ್ಲ. ಅವರಿಬ್ಬರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಖುರೈಶರೊಂದಿಗೆ ಯುದ್ಧದ ದಿವಸ ಮದೀನಕ್ಕೆ ತಲುಪಿದರು. ರಸೂಲುಲ್ಲಾಹ್[ಸ] ಅವರನ್ನು ಬೇಟಿ ಆಗಲು ಅವರು ಮದೀನದಿಂದ ಹೊರಟರು. ಅನಂತರ ಅವರಿಬ್ಬರು ರಸೂಲುಲ್ಲಾಹ್[ಸ] ಅವರು ಬದರ್‌ನಿಂದ ಹಿಂದಿರುಗಿದಾಗ **ತುರ್‌ಬಾನ್** ಎಂಬಲ್ಲಿ ಭೇಟಿ ಆದರು. ತುರ್‌ಬಾನ್ ಮದೀನದಿಂದ 19 ಮೈಲಿ ದೂರದ ಒಂದು ಸ್ಥಳವಾಗಿದೆ. ಅಲ್ಲಿ ಸಿಹಿ ನೀರಿನ ಅನೇಕ ಬಾವಿಗಳಿವೆ. ಬದರ್ ಯುದ್ಧಕ್ಕೆ ಹೋಗುವಾಗ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಇಲ್ಲಿ ತಂಗಿದ್ದರು. ಹಝ್ರತ್ ತಲ್‌ಹ[ರ] ಮತ್ತು ಹಝ್ರತ್ ಸಯೀದ್[ರ] ಯುದ್ಧದಲ್ಲಿ

ಭಾಗವಹಿಸಲಿಲ್ಲವಾದರೂ ಅವರಿಗೆ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಗನೀಮತ್ ಸಂಪತ್ತಿನಿಂದ ಪಾಲು ನೀಡಿದರು. ಹೀಗೆ ಅವರಿಬ್ಬರು ಬದರ್‌ನಲ್ಲಿ ಭಾಗಿಯಾಗಿದ್ದರು ಎಂದು ಹೇಳಲಾಗಿದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ 3, ಪುಟ–162, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990, ಅಸ್ಸೀರತುನ್ನಬವೀಯ ಫೀ ಝೌಇಲ್ ಖುರ್‌ಆನ್ ಸಂಪುಟ–2, ಪುಟ–123, ದಾರುಲ್‌ಖಲಮ್ ಸಮಿಶ್ಕ್, ಫರ್‌ಹಂಗ್ ಸೀರತ್, ಸಯ್ಯದ್ ಫಝ್ಲುರ್ರಹ್ಮಾನ್ ಪುಟ–75, ಝುವಾರ ಅಕಾಡಮಿ ಪಬ್‌ಲಿಕೇಷನ್ ಕರಾಚಿ 2003)

ಹಝ್ರತ್ ತಲ್‌ಹ ಉಹುದ್ ಮತ್ತು ಇತರ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹುದೈಬಿಯಾ ಸಂಧಿಯ ಸಂದರ್ಭದಲ್ಲಿಯೂ ಅವರು ಅಲ್ಲಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹತ್ತು ಜನರಿಗೆ ಅವರು ಜೀವಿಸಿದ್ದ ಕಾಲದಲ್ಲಿಯೇ ಸ್ವರ್ಗ ಲಭಿಸುವುದೆಂದು ಶುಭವಾರ್ತೆ ನೀಡಿದ್ದರು. ಆ ಹತ್ತು ಜನರಲ್ಲಿ ಹಝ್ರತ್ ತಲ್‌ಹ ಸೇರಿದ್ದರು. ಇಸ್ಲಾಮ್ ಧರ್ಮಕ್ಕೆ ಪ್ರವೇಶಿಸಿದ ಪ್ರಥಮ ಎಂಟು ಜನರಲ್ಲಿ ಹಝ್ರತ್ ತಲ್‌ಹ ಒಬ್ಬರಾಗಿದ್ದರು. ಹಝ್ರತ್ ಅಬೂಬಕರ್[ರ] ಮುಖಾಂತರ ಇಸ್ಲಾಮಿಗೆ ಸೇರಿದ ಐವರಲ್ಲಿ ಅವರೊಬ್ಬರಾಗಿದ್ದರು. ಹಝ್ರತ್ ಉಮರ್[ರ] ಸ್ಥಾಪಿಸಿದ ಆರು ಜನರ ಶೂರಾ (ಸಲಹೆಗಾರ) ಸಮಿತಿಯಲ್ಲಿ ಹಝ್ರತ್ ತಲ್‌ಹ ಸಹ ಇದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದುವ ಕಾಲದಲ್ಲಿ ತನ್ನ ತೃಪ್ತಿಯನ್ನು ಪ್ರಕಟಿಸಿದ ಜನರಲ್ಲಿ ಅವರು ಸೇರಿದ್ದರು. (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್‌ಹಾಬ್ ಭಾಗ–2, ಪುಟ–317, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, ಅಲ್ ಅಸಾಬ ಸಂಪುಟ–3, ಪುಟ–430, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1995)

ಯಝೀದ್ ಬಿನ್ ರೂಮಾನ್ ವರದಿ ಮಾಡುತ್ತಾರೆ: ಒಮ್ಮೆ ಹಝ್ರತ್ ಉಸ್ಮಾನ್ ಮತ್ತು ಹಝ್ರತ್ ತಲ್‌ಹ ಜೊತೆ ಸೇರಿ ಹಝ್ರತ್ ಝುಬೈರ್ ಬಿನ್ ಅವಾಮ್‌ರೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಇಸ್ಲಾಮಿನ ಸಂದೇಶ ನೀಡಿದರು. ಅವರಿಗೆ ಪವಿತ್ರ ಖುರ್‌ಆನ್ ಓದಿ ಹೇಳಿದರು. ಅವರಿಗೆ ಇಸ್ಲಾಮಿನ ಹಕ್ಕುಗಳ ಬಗ್ಗೆ ತಿಳಿಸಿದರು. ಅಲ್ಲಾಹನಿಂದ ದೊರಕುವ ಅನುಗ್ರಹಗಳ ಬಗ್ಗೆ ಶುಭವಾರ್ತೆ ನೀಡಿದರು. ಆಗ ಹಝ್ರತ್ ಉಸ್ಮಾನ್ ಮತ್ತು ಹಝ್ರತ್ ತಲ್‌ಹ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅಂಗೀಕರಿಸಿ ಮುಸ್ಲಿಮರಾದರು. ಅನಂತ ಹಝ್ರತ್ ಉಸ್ಮಾನ್[ರ] ಹೇಳುತ್ತಾರೆ ಎಲ್ಲೈ ಪ್ರವಾದಿವರ್ಯರೇ! ನಾನು ಈಗಲೇ ಸೀರಿಯಾದಿಂದ ಹಿಂದಿರುಗಿದ್ದೇನೆ. ಹಿಂದಿರುಗುತ್ತಿರುವಾಗ ಮಆನ್ ಎಂಬ ಸ್ಥಳದಲ್ಲಿ (ಈ ಸ್ಥಳ ಮೌತ ಎಂಬ ಸ್ಥಳಕ್ಕಿಂತ ಮುಂಚೆ ಒಂದು ಸ್ಥಳ ಇದೆ) ನಾವು ಮಲಗಿದ್ದೆವು. ಆಗ ಓರ್ವ ಕರೆ ನೀಡುವವನು ಅಲ್ಲಿಗೆ ಆಗಮಿಸಿ ಹೇಳಿದನು. ಎಲ್ಲೈ ಮಲಗಿರುವವರೇ! ಎದ್ದೇಳಿ ಅಹ್ಮದ್[ಸ] ಮಕ್ಕದಲ್ಲಿ ಪ್ರತ್ಯಕ್ಷನಾಗಿದ್ದಾರೆ. ತದನಂತರ ನಾವು ಅಲ್ಲಿಂದ ಹಿಂದಿರುಗಿದಾಗ ತಮ್ಮ ಬಗ್ಗೆ ಆಲಿಸಿದೆವು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–40, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2012, ಫರ್‌ಹಂಗ್ ಸೀರತ್, ಸಯ್ಯದ್ ಫಝ್ಲುರ್ರಹ್ಮಾನ್ ಪುಟ–279, ಝುವಾರ ಅಕಾಡಮಿ ಪಬ್ಲಿಕೇಷನ್ ಕರಾಚಿ 2003, ಮುಜಮುಲ್ ಬಲದಾನ್ ಸಂಪುಟ–3, ಪುಟ–173, ಅಝ್ಝುರ್‌ಖಾಅ ಮಕ್ತಬಲ್ ಅಸ್ರಿಯಾ ಬೈರೂತ್ 2014)

ಹಝ್ರತ್ ತಲ್‌ಹ ಹೇಳುತ್ತಾರೆ: ನಾನು ಬಸ್ರಾ ಪಟ್ಟದಲ್ಲಿದ್ದಾಗ ಒಬ್ಬ ಯಹೂದಿ ಮತಪಂಡಿತ ಯಹೂದಿಯರ ದೇವಾಲಯದಲ್ಲಿ ಹೀಗೆ ಹೇಳುತ್ತಿದ್ದನು: ವ್ಯಾಪಾರಿ ಸಂಘಗಳ ಜನರೊಂದಿಗೆ ವಿಚಾರಿಸಿರಿ, ಅವರ ಪೈಕಿ ಯಾರಾದರೂ ಹರಮ್ ಪ್ರದೇಶದಿಂದ ಆಗಮಿಸಿರುವರೋ ಎಂದು. ನಾನು ಹೇಳಿದೆ, ನಾನು ಅಲ್ಲಿಂದ ಬಂದಿರುವೆನು. ಆಗ ಮತ ಪಂಡಿತ ಕೇಳಿದನು: ಏನು ಅಹ್ಮದ್ ಆಗಮಿಸಿರುವರೇ? ನಾನು ಕೇಳಿದೆ ಯಾವ ಅಹ್ಮದ್? ಯಹೂದಿ ಪಂಡಿತ ಹೇಳಿದನು: ಅಬ್ದುಲ್ಲಾ ಬಿನ್ ಅಬ್ದುಲ್ ಮುತ್ತಲಿಬರ ಪುತ್ರ. ಅವರು ಪ್ರಕಟವಾಗಲಿರುವ ತಿಂಗಳು ಇದೇ ಆಗಿದೆ. ಅವರು ಕೊನೆಯ ಪ್ರವಾದಿ ಆಗಿರುವರು. ಅವರು ಪ್ರಕಟವಾಗುವ ಸ್ಥಳ ಹರಮ್ ಆಗಿದೆ. ಅವರು ಹಿಜ್‌ರತ್ ಮಾಡುವುದು ಖರ್ಜೂರದ ತೋಟಗಳಿರುವ ಮತ್ತು ಕಲ್ಲಿನಿಂದ ತುಂಬಿದ ಲವಣ ಭರಿತ ಭೂಮಿಗೆ. ನೀವು ಅವರನ್ನು ಬಿಟ್ಟು ಬಿಡಬಾರದು. ಹಝ್ರತ್ ತಲ್‌ಹ ಹೇಳುತ್ತಾರೆ: ಆ ಯಹೂದಿ ಮತಪಂಡಿತ ಹೇಳಿದ ಮಾತುಗಳು ನನ್ನ ಹೃದಯದಲ್ಲಿ ಮನೆ ಮಾಡಿದುವು. ನಾನು ವೇಗವಾಗಿ ಬಂದು ಮಕ್ಕವನ್ನು ತಲಪಿದೆ. ಅಲ್ಲಿ ವಿಚಾರಿಸಿದೆ: ಏನಾದರೂ ಹೊಸ ವಿಷಯ ಸಂಭವಿಸಿದೆಯೇ? ಜನರು ಹೇಳಿದರು: ಮುಹಮ್ಮದ್ ಬಿನ್ ಅಬ್ದುಲ್ಲಾ, ಅಮೀನ್, ನುಬುವ್ವತ್ ವಾದ ಮಾಡಿದ್ದಾರೆ. ಇಬ್ನು ಅಬೀ ಖುಹಾಫ (ಹಝ್ರತ್ ಅಬೂಬಕರ್) ಅವರನ್ನು ನಂಬಿರುವರು. ಹಝ್ರತ್ ತಲ್‌ಹ ಹೇಳುತ್ತಾರೆ: ನಾನು ಹಝ್ರತ್ ಅಬೂಬಕರ್‌ರ[ರ] ಬಳಿಗೆ ಹೋದೆನು. ಅವರೊಂದಿಗೆ ಯಹೂದಿ ಮತಪಂಡಿತನು ಹೇಳಿದ ಮಾತುಗಳನ್ನು ಹೇಳಿದೆನು. ಅನಂತರ ಅವರಿಬ್ಬರೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋದರು. ಹಝ್ರತ್ ತಲ್‌ಹ ಮುಸ್ಲಿಮರಾದರು. ಅನಂತರ ಅವರು ಯಹೂದಿ ಮತಪಂಡಿತ ಹೇಳಿದ ಮಾತುಗಳನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಬಹಳ ಸಂತೋಷಗೊಂಡರು. (ಅತ್ತಬಖತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–03, ಪುಟ–161, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಇತಿಹಾಸದ ಒಂದು ಗ್ರಂಥವಿದೆ ಅತ್ತಬಖಾತುಲ್ ಕುಬ್ರ ಅದರಲ್ಲಿ ಇದರ ಪ್ರಸ್ತಾವನೆ ಇದೆ. ಹಝ್ರತ್ ತಲ್‌ಹ ಮುಸ್ಲಿಮರಾದಾಗ ನೌಫಲ್ ಬಿನ್ ಖುವೈಲಿದ್ ಹಝ್ರತ್ ತಲ್‌ಹರನ್ನು ಮತ್ತು ಹಝ್ರತ್ ಅಬೂಬಕರನ್ನು ಒಂದು ಹಗ್ಗದಿಂದ ಒಟ್ಟಿಗೆ ಸೇರಿಸಿ ಕಟ್ಟಿದನು. ಆ ಕಾರಣದಿಂದ ಹಝ್ರತ್ ತಲ್‌ಹ ಮತ್ತು ಹಝ್ರತ್ ಅಬೂಬಕರ್‌ರನ್ನು ಖರೀನೈನ್ ಅಥವಾ ಇಬ್ಬರು ಸಂಗಡಿಗರು ಎಂದು ಕರೆಯಲಾಗುತ್ತಿತ್ತು. ನೌಫಲ್ ಖುರೈಶಿಗಳಲ್ಲಿ ತನ್ನ ನಿರ್ದಯತೆಗೆ ಪ್ರಸಿದ್ಧನಾಗಿದ್ದನು. ಅವರಿಬ್ಬರನ್ನು ಕಟ್ಟಲು ಹಝ್ರತ್ ತಲ್‌ಹರ ಸಹೋದರ ಉಸ್ಮಾನ್ ಬಿನ್ ಉಬೈದುಲ್ಲಾ ಸಹ ಸಹಕರಿಸಿದ್ದನು. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಹೋಗುವುದನ್ನು ತಡೆಯಲು ಮತ್ತು ಇಸ್ಲಾಮನ್ನು ಅವರು ತ್ಯಜಿಸಲಿಕ್ಕೋಸ್ಕರವಾಗಿಯೇ ಅವರನ್ನು ಆ ರೀತಿ ಕಟ್ಟಿಹಾಕಲಾಗಿತ್ತು. ಇಮಾಮ್ ಬೈಹಖೀ ಬರೆದಿದ್ದಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಪ್ರಾರ್ಥಿಸಿದರು. ಓ ಅಲ್ಲಾಹ್ ನೌಫಲ್‌ನ ಕೆಡುಕಿನಿಂದ ಅವರನ್ನು ರಕ್ಷಿಸು. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್ ಸಾಹೆಬ್ ಸಂಪುಟ–2, ಪುಟ–129–130)

ಹಝ್ರತ್ ಮಸ್‌ಊದ್ ಬಿನ್ ಖರಾಶ್[ರ] ಅವರು ವರದಿ ಮಾಡುತ್ತಾರೆ ಒಮ್ಮೆ ನಾನು ಸಫಾ ಮತ್ತು ಮರ್‌ವದ ನಡುವೆ ಓಡಾಡುತ್ತಿದ್ದಾಗ ನಾನು ಅನೇಕ ಜನರು ಓರ್ವ ಯುವಕನನ್ನು ಹಿಂಬಾಲಿತ್ತಿದ್ದನ್ನು ನೋಡುತ್ತಿದ್ದೆ. ಅವನ ಕೈ ಅವನ ಕುತ್ತಿಗೆಯಿಂದ ಕಟ್ಟಲಾಗಿತ್ತು. ಅದಕ್ಕೆ ನಾನು ಇವನು ಯಾರು ಎಂದು ಪ್ರಶ್ನಿಸಿದೆ. ಅದಕ್ಕೆ ಜನರು ಉತ್ತರಿಸಿದರು ತಲ್‌ಹ ಬಿನ್ ಉಬೈದುಲ್ಲಾ[ರ] ಆಗಿದ್ದಾನೆ ಇವನ ಧರ್ಮಭ್ರಷ್ಟನಾಗಿದ್ದಾನೆ ಅವರ ತಾಯಿ ಸಅಬ ಅವರ ಆಕ್ರೋಶದಿಂದ ಹಿಂಬಾಲಿಸುತ್ತಿದ್ದಳು. (ಅತ್ತಾರೀಖುಲ್ ಸಗೀರ್ ಅಲ್‌ಇಮಾಮ್ ಬುಖಾರಿ ಸಂಪುಟ–1, ಪುಟ–113, ದಾರುಲ್ ಮುಆರಿಫ ಬೈರೂತ್)

ಅಬ್ದುಲ್ಲಾ ಬಿನ್ ಸಅದ್ ತನ್ನ ಪಿತನಿಂದ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನದ ಕಡೆಗೆ ಹಿಜ್‌ರತ್ ಮಾಡುತ್ತಿರುವಾಗ ಖದಾರ್ ಎಂಬ ಕಣಿವೆ ಪ್ರದೇಶದಿಂದ ದಾಟಿ ಹೋಗುವಾಗ ಬೆಳಗ್ಗೆ ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾರನ್ನು ಅಲ್ಲಿ ಭೇಟಿಯಾದರು. ಹಝ್ರತ್ ತಲ್‌ಹ ಸಿರಿಯಾದಿಂದ ವ್ಯಾಪಾರಿ ಸಂಘದೊಂದಿಗೆ ಬರುತ್ತಿದ್ದರು. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮತ್ತು ಹಝ್ರತ್ ಅಬೂಬಕರ್‌ರಿಗೆ ಸಿರಿಯಾದಿಂದ ತಂದ ಬಟ್ಟೆಗಳನ್ನು ಧರಿಸಲು ನೀಡಿದರು. ಮದೀನ ನಿವಾಸಿಗಳು ಬಹಳ ಸಮಯದಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನವನ್ನು ನಿರೀಕ್ಷಿಸುತ್ತಾ ಇದ್ದರೆಂದು ಸಹ ತಿಳಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವೇಗವಾಗಿ ಸಂಚರಿಸಲು ತೊಡಗಿದರು. ಹಝ್ರತ್ ತಲ್‌ಹ ಮಕ್ಕಕ್ಕೆ ಮರಳಿ ಹೋದರು. ಅವರು ತಮ್ಮ ಕೆಲಸ ಪೂರ್ಣವಾಗಿ ಮಾಡಿ ಮುಗಿಸಿದ ನಂತರ ಹಝ್ರತ್ ಅಬೂಬಕರ್‌ರ ಕುಟುಂಬದವರನ್ನು ತಮ್ಮೊಂದಿಗೆ ಕರೆದುಕೊಂಡು ಮದೀನವನ್ನು ತಲುಪಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–161, ದಾರುಲ್ ಕುತುಬ್ ಇಲ್‌ಮಿಯ ಬೈರೂಥ್ 1990) (ಮುಜಮುಲ್‌ಬಲದಾನ್ ಸಂಪುಟ–2, ಪುಟ–400, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ತಲ್‌ಹ[ರ] ಮತ್ತು ಹಝ್ರತ್ ಝುಬೈರ್[ರ] ಅವರಿಬ್ಬರು ಮಕ್ಕದಲ್ಲಿ ಇಸ್ಲಾಮ್ ಸ್ವೀಕರಿಸಿದಾಗ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಿಜ್ರತ್ ಮಾಡುವುದಕ್ಕೆ ಮುಂಚೆ ಅವರ ಇಬ್ಬರ ನಡವೆ ಸಹೋದರ ಸಂಬಂಧವನ್ನು ಸ್ಥಾಪಿಸಿದ್ದರು. ಮತ್ತು ಮುಸ್ಲಿಮರು ಹಿಜ್ರತ್ ಮಾಡಿ ಮದೀನಕ್ಕೆ ಆಗಮಿಸಿದ್ದಾಗ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ತಲ್‌ಹ[ರ] ಮತ್ತು ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ[ರ] ಅವರ ಮಧ್ಯೆ ಸಹೋದರ ಸಂಬಂಧವನ್ನು ಸ್ಥಾಪಿಸಿದ್ದರು.

ಇನ್ನೊಂದು ವರದಿಯ ಪ್ರಕಾರ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಹಝ್ರತ್ ತಲ್‌ಹ[ರ] ಮತ್ತು ಹಝ್ರತ್ ಸಯೀದ್ ಬಿನ್ ಝೈದ್[ರ] ಅವರ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಮೂರನೆಯ ವರದಿಯ ಪ್ರಕಾರ ಹಝ್ರತ್ ತಲ್‌ಹ[ರ] ಮತ್ತು ಹಝ್ರತ್ ಉಬೈ ಬಿನ್

ಕಅಬ್(ರ) ರವರ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದ್ದರು. ಹಝ್‌ರತ್ ತಲ್‌ಹ(ರ) ಅವರು ಮದೀನಕ್ಕೆ ಹಿಜ್ರತ್ ಮಾಡಿದಾಗ ಅವರು ಹಝ್‌ರತ್ ಅಸ್‌ಅದ್ ಬಿನ್ ಝುರಾರ(ರ) ಅವರ ಮನೆಯಲ್ಲಿ ತಂಗಿದ್ದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ–3, ಪುಟ–85, ದಾರಯಲ್ ಕುತುಬ್ ಇಲ್‌ಮಿಯ ಬೈರೂತ್ 2003, ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–162, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್‌ರತ್ ತಲ್‌ಹರವರು ಮಾಡಿದ ಸಾಂಪತ್ತಿಕ ತ್ಯಾಗಗಳ ಕಾರಣ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಫಯಾಝ್ ಎಂದು ಕರೆದರು. ಒಮ್ಮೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಖರ್ದ್ ಯುದ್ಧದ ಸಂದರ್ಭದಲ್ಲಿ ನದಿ ಮೂಲದ ಹತ್ತಿರದಿಂದ ಹೊರಟಾಗ ಹುಝೂರ್(ಸ) ಇದು ಯಾವ ಬಾವಿ ಎಂದು ಕೇಳಿದಾಗ ಈ ಬಾವಿಯ ಹೆಸರು ಬಿಸಾನ್ ಎಂದಾಗಿದೆ ಮತ್ತು ಇದರ ನೀರು ಕಹಿ ಆಗಿದೆ ಎಂದು ಹೇಳಲಾಯಿತು. ಅದಕ್ಕೆ ಹುಝೂರ್(ಸ) ಹೇಳಿದರು ಇಲ್ಲ ಇದರ ಹೆಸರು ನೂಮಾನ್ ಎಂದಾಗಿದೆ ಮತ್ತು ಇದರ ನೀರು ಸಿಹಿ ಮತ್ತು ಶುದ್ಧ ಆಗಿದೆ ಎಂದರು. ಹಝ್‌ರತ್ ತಲ್‌ಹ ಬಿನ್ ಉಬೈದುಲ್ಲ(ರ) ಅವರು ಅದನ್ನು ಖರೀದಿಸಿ ಅದನ್ನು ವಖ್‌ಫ್ (ದತ್ತು) ಮಾಡಿದರು. ಅದರ ನೀರು ಸಿಹಿ ಆಯಿತು. ಹಝ್‌ರತ್ ತಲ್‌ಹ(ರ) ರಸೂಲುಲ್ಲಾಹ್(ಸ) ಅವರ ಬಳಿ ಬಂದು ಈ ಘಟನೆಯ ಬಗ್ಗೆ ತಿಳಿಸಿದಾಗ ರಸೂಲುಲ್ಲಾಹ್(ಸ) ಹೇಳಿದರು: ತಲ್‌ಹ(ರ) ನೀವು ಬಹಳ ಫಯ್ಯಾಝ್ (ಮಹಾದಾನಿ) ಆಗಿದ್ದೀರಿ. ಹೀಗೆ ಅವರನ್ನು 'ತಲ್‌ಹ ಫಯ್ಯಾಝ್' ಎಂದು ಕರೆಯಲಾಯಿತು.

ಮೂಸಾ ಬಿನ್ ತಲ್‌ಹ ತನ್ನ ಪಿತ ತಲ್‌ಹರಿಂದ ವರದಿ ಮಾಡುತ್ತಾರೆ: ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಹುದ್ ಯುದ್ಧದ ದಿನದಂದು ಹಝ್‌ರತ್ ತಲ್‌ಹರಿಗೆ ತಲ್‌ಹತುಲ್ ಖೈರ್ ಎಂಬ ಹೆಸರು ನೀಡಿದರು. ತಬೂಕ್ ಯುದ್ಧ ಮತ್ತು ಝೀಖರದ್ ಯುದ್ಧಗಳ ಸಂದರ್ಭಗಳಲ್ಲಿ ಅವರಿಗೆ ತಲ್‌ಹತುಲ್ ಫಯಾಝ್ ಎಂಬ ಹೆಸರು ನೀಡಿದರು. ಹುನೈನ್ ಯುದ್ಧದ ಸಂದರ್ಭದಲ್ಲಿ ಅವರಿಗೆ ತಲ್‌ಹತುಲ್ ಜೂದ್ ಎಂಬ ಹೆಸರು ಸಹ ನೀಡಲಾಯಿತು. ಅದರ ಅರ್ಥ ಔದಾರ್ಯವಂತ ಎಂದಾಗಿದೆ. (ಅಸ್ಸೀರತುಲ್ ಹಲಬೀಯ ಸಂಪುಟ–3, ಪುಟ–478, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002, ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ–3, ಪುಟ–85, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಸಾಯಿಬ್ ಬಿನ್ ಯಝೀದ್ ವರದಿ ಮಾಡುತ್ತಾರೆ: ಪ್ರಯಾಣ ಕಾಲ ಅಲ್ಲದೆಯೂ ನಾನು ತಲ್‌ಹ ಬಿನ್ ಉಬೈದುಲ್ಲಾರ ಜೊತೆಗಿದ್ದೆ. ಸಾಮಾನ್ಯವಾಗಿ ಹಣಕ್ಕೆ ಸಂಬಂಧಿಸಿ, ಬಟ್ಟೆಗಳಿಗೆ ಸಂಬಂಧಿಸಿ ಮತ್ತು ಊಟೋಪಚಾರಗಳಿಗೆ ಸಂಬಂಧಿಸಿ ಅವರಿಗಿಂತ ಔದಾರ್ಯವಂತರಾಗಿ ಬೇರೆ ಯಾರನ್ನೂ ನಾನು ಕಾಣಲಿಲ್ಲ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–167, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಉಹುದ್ ದಿವಸ ತಮ್ಮ ಸಹಾಬರವರ ಒಂದು ಜಮಾಅತ್ತನ್ನೊಂದಿಗೆ ಮೃತರಾಗುವ ತನಕ ಹೋರಾಡುವ ಬೈಅತ್ ತೆಗೆದುಕೊಂಡರು. ಮುಸ್ಲಿಮರು ಬಾಹ್ಯವಾಗಿ ಸುಲಿದಾಗ ಅವರು ದೃಢವಾಗಿ ನಿಂತು ತಮ್ಮ ಜೀವವನ್ನು ಪಣಕ್ಕಿಟ್ಟು ರಸೂಲುಲ್ಲಾಹ್(ಸ) ಅವರನ್ನು ಸಂರಕ್ಷಿಸುತ್ತಿದ್ದರು ಎಲ್ಲಿಯ ತನಕ ಎಂದರೆ ಅವರಲ್ಲಿ ಅನೇಕ ಜನರು ಮೃತರಾದರು. ಆ ಬೈಅತ್ ಮಾಡುವವರಲ್ಲಿ ಹಝ್‌ರತ್ ಅಬೂಬಕ್ಕರ್(ರ), ಹಝ್‌ರತ್ ಉಮರ್(ರ), ಹಝ್‌ರತ್ ತಲ್‌ಹ(ರ), ಹಝ್‌ರತ್ ಸಾಅ(ರ), ಹಝ್‌ರತ್ ಸಹಲ್ ಬಿನ್ ಹುನೈಫ್(ರ) ಮತ್ತು ಹಝ್‌ರತ್ ಅಬೂ ದುಜಾನ(ರ) ಸೇರಿದ್ದರು. (ಅಲ್ ಅಸಾಬ ಫೀ ತಮೀಝಿಸ್ಸಹಾಬ ಭಾಗ–3, ಪುಟ–431, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಹಝ್‌ರತ್ ತಲ್‌ಹ ಉಹುದ್ ಯುದ್ಧದಲ್ಲಿ ಭಾಗವಹಿಸಿದ್ದರು. ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಸ್ಥಿರವಾಗಿ ನಿಂತು ಹೋರಾಡಿದವರಲ್ಲಿ ಅವರು ಸೇರಿದ್ದರು. ಅವರು ತಾನು ಮೃತರಾಗುವ ತನಕ ಹೋರಾಡುವ ಪ್ರತಿಜ್ಞೆ ಸಹ ಮಾಡಿದ್ದರು. ಮಾಲಿಕ್ ಬಿನ್ ಝುಹೀರ್ ಎಂಬ ಅವಿಶ್ವಾಸಿ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಬಾಣ ಹೂಡಿದಾಗ ಹಝ್‌ರತ್ ತಲ್‌ಹ ತನ್ನ ಕೈಯನ್ನು ಅಡ್ಡವಾಗಿ ಇರಿಸಿ ಅವರ ಮುಖವನ್ನು ರಕ್ಷಿಸಿದರು. ಆ ಬಾಣ ಹಝ್‌ರತ್ ತಲ್‌ಹರ ಕಿರು ಬೆರಳಿಗೆ ತಗಲಿತು. ಅನಂತರ ಆ ಬೆರಳು ನಿಷ್ಪ್ರಯೋಜಕವಾಯಿತು. ಉಹುದ್ ಯುದ್ಧದ ಸಂದರ್ಭದಲ್ಲಿ ಒಬ್ಬ ಬಹುದೇವಾರಾಧಕ ಹಝ್‌ರತ್ ತಲ್‌ಹರ ತಲೆಗೆ ಎರಡು ಸಲ ಗಾಯವಾಗುವಂತೆ ಮಾಡಿದನು. ಆ ಕಾರಣದಿಂದ ತುಂಬಾ ರಕ್ತ ಹರಿಯಿತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–162–163, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಈ ಘಟನೆಯ ಬಗ್ಗೆ ಸೀರತ್ ಹಲ್‌ಬಿಯ್ಯಾ ಎಂಬ ಗ್ರಂಥದಲ್ಲಿ ಹೀಗೆ ಬರೆದಿದೆ: ಖೈಸ್ ಬಿನ್ ಅಬೂ ಹಾಝಿಮ ಹೇಳುತ್ತಾರೆ: ನಾನು ಉಹುದ್ ಯುದ್ಧದ ದಿನ ತಲ್‌ಹ ಬಿನ್ ಉಬೈದುಲ್ಲಾರವರ ಕೈಯ ಸ್ಥಿತಿಯನ್ನು ಕಂಡೆನು. ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಬಾಣಗಳಿಂದ ರಕ್ಷಿಸುವಾಗ ಅದು ಗಾಯಗೊಂಡು ನಿಷ್ಪ್ರಯೋಜಕವಾಗಿತ್ತು. ಒಂದು ವರದಿ ಹೀಗೆ ಸಹ ಇದೆ: ಬಾಣ ತಾಗಿದಾಗ ಕೈಯಿಂದ ಬಹಳ ರಕ್ತ ಹರಿಯಿತು. ಹಝ್‌ರತ್ ತಲ್‌ಹ ಬಲಹೀನತೆಯಿಂದ ಮೂರ್ಛೆ ಹೋದರು. ಹಝ್‌ರತ್ ಅಬೂಬಕರ್ ಅವರ ಮುಖದ ಮೇಲೆ ನೀರು ಚಿಮುಕಿಸಿದಾಗ ಅವರು ಎಚ್ಚರಗೊಂಡರು. ಎಚ್ಚರಗೊಂಡ ಕೂಡಲೆ ವಿಚಾರಿಸಿದರು: ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಿತಿ ಹೇಗಿದೆ ಎಂದು. ಹಝ್‌ರತ್ ಅಬೂಬಕರ್ ಹೇಳಿದರು: ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಚೆನ್ನಾಗಿದ್ದಾರೆ. ಅವರೇ ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದರು. ಹಝ್‌ರತ್ ತಲ್‌ಹ ಹೇಳಿದರು: **ಅಲ್‌ಹಮ್‌ದುಲ್ಲಿಲ್ಲಾಹ್. ಕುಲ್ಲುಮುಸೀಬತನ್ ಬಅ್‌ದಹೂ ಜಲಾ** – ಎಲ್ಲಾ ಸ್ತುತಿಗಳು ಅಲ್ಲಾಹನಿಗೆ. ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸುರಕ್ಷಿತರಾಗಿದ್ದರೆ ಇತರ ಎಲ್ಲಾ ವಿಪತ್ತುಗಳು ನಗಣ್ಯವೇ ಆಗಿವೆ. (ಅಸ್ಸೀರತುಲ್ ಹಲ್‌ಬಿಯ್ಯ ಸಂಪುಟ–2, ಪುಟ–324, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಈ ಯುದ್ಧದ ಘಟನೆಯ ಬಗ್ಗೆ ಒಂದು ವರದಿ ಒಂದು ಇತಿಹಾಸದ ಗ್ರಂಥದಲ್ಲಿ ಹೀಗಿದೆ: ಹಝ್‌ರತ್ ಝುಬೈರ್ ಹೇಳುತ್ತಾರೆ: ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಉಹುದ್ ಯುದ್ಧದ ದಿನ ಎರಡು ಕವಚಗಳನ್ನು ಧರಿಸಿದ್ದರು. ಅವರು ಬಂಡೆ ಕಲ್ಲಿನ ಮೇಲೇರಲು ಇಚ್ಛಿಸಿದರು. ಆದರೆ ಕವಚಗಳ ಭಾರದ ಕಾರಣದಿಂದಲೂ ತಲೆ ಮತ್ತು ಮುಖದಲ್ಲಿ ಗಾಯಗಳಿದ್ದು ರಕ್ತಸ್ರಾವದ ಕಾರಣದಿಂದಲೂ ಅವರಿಗೆ ಅದು ಸಾಧ್ಯವಾಗಲಿಲ್ಲ. ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್‌ರತ್ ತಲ್‌ಹರನ್ನು ಕೆಳಗೆ ಕುಳ್ಳಿರಿಸಿದರು. ಅವರ ಮೇಲೆ ಕಾಲು ಇರಿಸಿ ಬಂಡೆಕಲ್ಲಿನ ಮೇಲೆ ಹತ್ತಿದರು. ಹಝ್‌ರತ್ ಝುಬೈರ್ ಹೇಳುತ್ತಾರೆ: ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದುದನ್ನು ನಾನು ಆಲಿಸಿದೆ: ತಲ್‌ಹ ತನಗೆ ಸ್ವರ್ಗವನ್ನು ಕಡ್ಡಾಯ ಗೊಳಿಸಿದನು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ–3, ಪುಟ–85, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, ಅಸ್ಸೀರತುಲ್ ಹಲಬೀಯ್ಯ ಸಂಪುಟ–2, ಪುಟ–321, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಮತ್ತೊಂದು ವರದಿ ಪ್ರಕಾರ ಹಝ್‌ರತ್ ತಲ್‌ಹರ ಒಂದು ಕಾಲಿನಲ್ಲಿ ಕುಂಟುತನವಿತ್ತು. ಆದುದರಿಂದ ಅವರಿಗೆ ಸರಿಯಾಗಿ ನಡೆಯಲಾಗುತ್ತಿರಲಿಲ್ಲ. ಉಹುದ್ ಯುದ್ಧದ ದಿನ ಹಝ್‌ರತ್ ತಲ್‌ಹರು ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಎತ್ತಿದಾಗ ಅವರು ಬಹಳ ಪ್ರಯತ್ನಪಟ್ಟು ತಮ್ಮ ಹೆಜ್ಜೆ ಸರಿಯಾಗಿರಿಸಿ ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಕಷ್ಟ ಉಂಟಾಗದಂತೆ ನೋಡಿಕೊಂಡರು. ಅನಂತರ ಶಾಶ್ವತವಾಗಿ ಅವರ ಕುಂಟುತನ ದೂರ ಸರಿಯಿತು. (ಸೀರತಲ್ ಹಲಬಿಯ್ಯ ಸಂಪುಟ–2, ಪುಟ–322, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಆಯಿಶ ಮತ್ತು ಉಮ್ಮು ಇಸ್‌ಹಾಖ್ ಇವರಿಬ್ಬರು ಹಝ್‌ರತ್ ತಲ್‌ಹರ ಪುತ್ರಿಯರಾಗಿದ್ದರು. ಅವರಿಬ್ಬರೂ ಹೇಳಿದರು: ಉಹುದ್ ಯುದ್ಧದಲ್ಲಿ ನಮ್ಮ ತಂದೆಯವರಿಗೆ 24 ಗಾಯಗಳಾಗಿದ್ದುವು. ಅದರಲ್ಲಿ ಒಂದು ಚೌಕೋನ ಗಾಯ ತಲೆಯಲ್ಲಾಗಿತ್ತು. ಮತ್ತು ಕಾಲಿನ ನರವು ಕತ್ತರಿಸಿ ಹೋಗಿತ್ತು. ಬೆರಳುಗಳು ಜೋಮು ಆಗಿತ್ತು ಮತ್ತು ಉಳಿದ ಗಾಯಗಳು ಇಡಿ ದೇಹದ ಮೇಲಾಗಿತ್ತು. ಅವರು ಪ್ರಜ್ಞಾ ಶೂನ್ಯರಾಗಿದ್ದರು. ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಎರಡು ಹಲ್ಲುಗಳು ಕಿತ್ತು ಹೋದುವು. ಅವರ ಮುಖದಲ್ಲಿಯೂ ಗಾಯಗಳಿದ್ದುವು. ಅವರು ಸಹ ಪ್ರಜ್ಞಾ ಶೂನ್ಯರಾದರು. ಆಗ ಹಝ್‌ರತ್ ತಲ್‌ಹ ಅವರನ್ನು ತನ್ನ ಬೆನ್ನ ಮೇಲೆ ಹೊತ್ತುಕೊಂಡು ಹೋಗಿ ಕಣಿವೆ ಪ್ರದೇಶದಲ್ಲಿ ಕುಳ್ಳಿರಿಸಿದರು. ಇದು ತಬಖಾತುಲ್ ಕುಬ್ರದ ಉಲ್ಲೇಖವಾಗಿದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಬಾಗ–3, ಪುಟ—163, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಉಹುದ್ ದಿವಸ ಖಾಲಿದ್ ಬಿನ್ ವಲೀದ್ ಮುಸ್ಲಿಮರ ಮೇಲೆ ಅಕಸ್ಮಿಕವಾಗಿ ಹಲ್ಲೆ ನಡೆಸಿದಾಗ ಮುಸ್ಲಿಮರು ಚದುರಿ ಹೋದರು. ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ಘಟನೆ ಬಗ್ಗೆ ಹೀಗೆ ಹೇಳುತ್ತಾರೆ: ಹಝ್‌ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಂತಿದ್ದ ಸ್ಥಳವನ್ನು ಅವಿಶ್ವಾಸಿಗಳು ತೀವ್ರವಾಗಿ ಆಕ್ರಮಿಸಲು ತೊಡಗಿದ್ದರು. ಕೆಲವು ಸಹಾಬಿಗಳು ಅವರ ರಕ್ಷಣೆಗಾಗಿ ಅವರನ್ನು ಸುತ್ತುವರಿದರು. ಒಬ್ಬರ ನಂತರ ಇನ್ನೊಬ್ಬ ಸಹಾಬಿ ಅವರನ್ನು ರಕ್ಷಿಸುತ್ತಾ ಮೃತರಾಗಲು ತೊಡಗಿದರು. ಖಡ್ಗಧಾರಿಗಳಲ್ಲದೆ ಬಿಲ್ಲುಗಾರರು ಎತ್ತರವಾದ ಸ್ಥಳಗಳಿಂದ ಬಾಣ ಹೂಡುತ್ತಾ

ಇದ್ದರು. ಆಗ ಹಝ್ರತ್ ತಲ್ಹ ಬಿಲ್ಲುಗಾರರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಡೆಗೆ ಬಾಣ ಎಸೆಯುವುದನ್ನು ಗಮನಿಸಿ ತನ್ನ ಕೈಯನ್ನು ಅವರ ಮುಖದ ಮುಂದೆ ಇರಿಸಿದರು. ಒಂದರ ನಂತರ ಇನ್ನೊಂದರಂತೆ ಬಾಣಗಳು ಹಝ್ರತ್ ತಲ್‌ಹರ ಕೈಗೆ ಬಂದು ಚುಚ್ಚುತ್ತಿದ್ದುವು. ಆದರೆ ತನ್ನ ಜೀವವನ್ನೇ ಪಣವಾಗಿಟ್ಟ ನಿಷ್ಠಾವಂತನಾದ ಆ ಸಹಾಬಿ ತನ್ನ ಕೈಯನ್ನು ಅಲುಗಾಡಿಸಲಿಲ್ಲ. ಬಾಣಗಳು ಬಂದು ಚುಚ್ಚುತ್ತಿದ್ದುವು ಮತ್ತು ಗಾಯಗಳು ಅಧಿಕವಾದುದರಿಂದ ಅವರ ಕೈ ಸಂಪೂರ್ಣ ಉಪಯೋಗ ಶೂನ್ಯವಾಯಿತು. ಅವರ ಒಂದು ಕೈ ಮಾತ್ರ ಉಳಿಯಿತು. ಎಷ್ಟೋ ವರ್ಷಗಳ ನಂತರ, ನಾಲ್ಕನೆಯ ಖಲೀಫರ ಕಾಲದಲ್ಲಿ ಅಂತಃ ಕಲಹಗಳು ತಲೆದೋರಿದಾಗ ಯಾವುದೋ ಒಬ್ಬ ವಿರೋಧಿ ಹಝ್ರತ್ ತಲ್‌ಹರನ್ನು ನಿಂದಾತ್ಮಕವಾಗಿ 'ಒಂಟಿಗೈಯವ' ಎಂದು ಕರೆದಾಗ ಇನ್ನೊಬ್ಬ ಸಹಾಬಿ ಹೇಳಿದರು: ಹೌದು ಅವರು ಒಂಟಿಗೈಯವರೇ ಆಗಿದ್ದಾರೆ. ಆದರೆ ಎಂತಹ ಅದೃಷ್ಟಶಾಲಿ ಒಂಟಿಗೈ! ಅವರು ಒಂಟಿಗೈಯವನಾದುದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖವನ್ನು ರಕ್ಷಿಸುವಾಗ ಎಂಬುದು ನಿನಗೆ ತಿಳಿದಿಲ್ಲವೇ? ಉಹುದ್ ಯುದ್ಧದ ನಂತರ ಒಬ್ಬರು ಹಝ್ರತ್ ತಲ್‌ಹರೊಂದಿಗೆ ಕೇಳಿದರು: ನಿಮ್ಮ ಕೈಗಳಿಗೆ ಬಾಣ ತಗಲುತ್ತಿದ್ದಾಗ ನಿಮಗೆ ನೋವಾಗುತ್ತಿರಲಿಲ್ಲವೇ? ನಿಮ್ಮ ಬಾಯಿಯಿಂದ ಉಫ್ ಎಂಬ ಶಬ್ದವೂ ಹೊರಡಲಿಲ್ಲವೇ? ಹಝ್ರತ್ ತಲ್‌ಹ ಹೇಳಿದರು: ನನಗೆ ನೋವು ಆಗುತ್ತಿತ್ತು. ಉಫ್ ಎಂಬ ಶಬ್ದ ಹೊರಬರುವಂತಾಗುತ್ತಿತ್ತು. ಆದರೆ ನಾನು ನನ್ನ ನೋವನ್ನು ಸೂಚಿಸುವ ಶಬ್ದ ಹೊರಡಿಸುತ್ತಿರಲಿಲ್ಲ. ಏಕೆಂದರೆ ಆಗ ನನ್ನ ಕೈ ಅಲುಗಾಡಿ ಬಾಣ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖಕ್ಕೆ ತಾಗಬಾರದು ಎಂದು. (ದೀಬಾಚ ತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್ ಸಂಪುಟ–20, ಪುಟ–250)

ಹಮ್ರಾ ಉಲ್‌ಅಸದ್ ಎಂಬ ಯುದ್ಧಕ್ಕೆ ಹೊರಟಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ತಲ್‌ಹರನ್ನು ಕಂಡರು. ಅವರು ಕೇಳಿದರು: ತಲ್‌ಹ ನಿಮ್ಮ ಆಯುಧಗಳು ಎಲ್ಲಿವೆ? ಹಝ್ರತ್ ತಲ್‌ಹ ಹೇಳಿದರು: ಇಲ್ಲೇ ಹತ್ತಿರದಲ್ಲಿವೆ. ಹೀಗೆ ಹೇಳಿ ಅವರು ಬೇಗನೆ ಹೋಗಿ ಆಯುಧಗಳನ್ನು ತಂದರು. ಆಗ ಅವರ ಎದೆಯ ಮೇಲೆ ಮಾತ್ರ ಉಹುದ್ ಯುದ್ಧದ ಒಂಬತ್ತು ಗಾಯಗಳಿದ್ದುವು. ಅವರ ಇಡೀ ದೇಹದ ಮೇಲೆ ಸುಮಾರು ಎಪ್ಪತ್ತಕ್ಕಿಂತ ಹೆಚ್ಚು ಗಾಯಗಳಾಗಿದ್ದವು. ಹಝ್ರತ್ ತಕ್‌ಹ ಹೇಳುತ್ತಾರೆ: ನಾನು ನನ್ನ ಗಾಯಗಳಿಗಿಂತ ಹೆಚ್ಚು ರಸೂಲುಲ್ಲಾಹ್(ಸ) ಅವರ ಗಾಯಗಳ ಬಗ್ಗೆ ಚಿಂತಿಸುತ್ತಿದ್ದೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನನ್ನ ಬಳಿ ಬಂದು ಕೇಳಿದರು ನೀನು ಶತ್ರುಗಳನ್ನು ಎಲ್ಲಿ ನೋಡಿದೆ? ನಾನು ಉತ್ತರಿಸಿದೆ ಇಳಿಜಾರು ಪ್ರದೇಶದಲ್ಲಿ. ಅದಕ್ಕೆ ಪ್ರವಾದಿ(ಸ) ಹೇಳಿದರು ನನ್ನ ಯೋಚನೆಯು ಸಹ ಅದೇ ಆಗಿತ್ತು. ಖುರೈಶರ ಬಗ್ಗೆ ಪ್ರವಾದಿ(ಸ) ಹೇಳಿದರು ಇನ್ನು ನಮಗೆ ಈ ರೀತಿಯ ಯಾವುದೇ ಸಂದರ್ಭವು, ನಾವು ಅಲ್ಲಾಹನ ಅನುಗ್ರದಿಂದ ಮಕ್ಕವನ್ನು ವಿಜಯಶಾಲಿಯಾಗುವ ತನಕ ಬರುವುದಿಲ್ಲ. (ಸೀರತುಲ್ ಹಲಬಿಯ್ಯ ಸಂಪುಟ–2, ಪುಟ–350–351, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ತಬೂಕ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಮಾಚಾರ ಲಭಿಸಿತು. ಕೆಲವು ಕಪಟ ವಿಶ್ವಾಸಿಗಳು ಸೂಯಲಮ್ ಎಂಬ ಯಹೂದಿ ವ್ಯಕ್ತಿಯ ಮನೆಯಲ್ಲಿ ಜಮಾಯಿಸುತ್ತಿದ್ದಾರೆ ಎಂದು. ಅವನ ಮನೆ ಜಾಸೂಮ್ ಎಂಬ ಸ್ಥಳದಲ್ಲಿತ್ತು. ಜಾಸೂಮನ್ನು ಬಿಲ್‌ರೆ ಜಾಸೂಮ್ ಎಂದೂ ಸಹ ಕರೆಯುತ್ತಾರೆ. ಅವರು ಜನರನ್ನು ಯುದ್ಧಕ್ಕೆ ಹೋಗುವುದರಿಂದ ತಡೆಯುತ್ತಿದ್ದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ತಲ್‌ಹರನ್ನು ಕೆಲವು ಸಹಾಬರ ಜೊತೆಗೆ ಕಳುಹಿಸಿ ಆ ಯಹೂದಿಯ ಮನೆಯನ್ನು ಸುಟ್ಟು ಹಾಕಲು ಆಜ್ಞಾಪಿಸಿದರು. ಹಝ್ರತ್ ತಲ್‌ಹ ಹಾಗೆಯೇ ಮಾಡಿದರು. ಝುಹ್ಹಾಖ್ ಬಿನ್ ಖಲೀಫ ಮನೆಯ ಹಿಂಬಾಗದಿಂದ ಓಡಿ ಹೋಗುವಾಗ ಅವನ ಕಾಲು ಮುರಿದು ಹೋಯಿತು. ಅವನ ಜೊತೆಗಿದ್ದವರು ಓಡಿ ಹೋದರು. (ಫರ್‌ಹಂಗ್ ಸೀರತ್, ಸಯ್ಯದ್ ಫಝ್‌ಲುರ್ರಹ್ಮಾನ್, ಪುಟ–84, ಝುವಾರ ಅಕಾಡಮಿ ಪಬ್ಲಿಕೇಷನ್ ಕರಾಚಿ 2003)

ಹಝ್ರತ್ ಅಲಿ ಹೇಳುತ್ತಾರೆ: ನನ್ನ ಎರಡು ಕಿವಿಗಳು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳುವುದನ್ನು ಆಲಿಸಿತು: ತಲ್‌ಹ ಮತ್ತು ಝುಬೈರ್ ಸ್ವರ್ಗದಲ್ಲಿ ನನ್ನ ಜೊತೆಗಾರರಾಗುವರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಭಾಗ–3, ಪುಟ–86, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2003)

ತಬೂಕ್ ಯುದ್ಧದಲ್ಲಿ ಹಿಂದುಳಿಯುವವರಲ್ಲಿ ಹಝ್ರತ್ ಕಅಬ್ ಬಿನ್ ಮಾಲಿಕ್(ರ) ಅವರೂ ಇದ್ದರು. ಅವರನ್ನು ಬಹಿಷ್ಕರಿಸಲಾಗಿತ್ತು. ನಲವತ್ತು ದಿವಸದ ನಂತರ ಅವರ ತೌಬ ಪಶ್ಚಾತ್ತಾಪವನ್ನು ಅಲ್ಲಾಹನು ಸ್ವೀಕರಿಸಿದ ನಂತರ ಅವರನ್ನು ಕ್ಷಮಿಸಲಾಯಿತು ಮತ್ತು ಇವರು ಮಸೀದಿಯಲ್ಲಿ ಪ್ರವಾದಿ(ಸ) ಭೇಟಿ ಆಗಲು ಆಗಮಿಸಿದಾಗ ಎಲ್ಲರಿಗಿಂತ ಮೊದಲು ಹಝ್ರತ್ ತಲ್‌ಹ(ರ) ರವರು ಇವರನ್ನು ಆಲಂಘಿಸಿದರು. ಅವರಿಗೆ ಶುಭಾಷಯ ಕೋರಿದರು. ಹಝ್ರತ್ ತಲ್‌ಹ(ರ) ಅವರನ್ನು ಬಿಟ್ಟರೆ ಇನ್ನು ಯಾರು ಎದ್ದೇಳಲಿಲ್ಲ. ಹಝ್ರತ್ ಕಅಬ್ ಬಿನ್ ಮಾಲಿಕ್ ಹೇಳುತ್ತಾರೆ ನಾನು ಹಝ್ರತ್ ತಲ್‌ಹ(ರ) ಅವರ ಈ ಉಪಕಾರವೂ ಎಂದೂ ಮರೆಯುವುದಿಲ್ಲ. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್ ಸಾಹೆಬ್, ಸಂಪುಟ–2, ಪುಟ–145)

ಹಝ್ರತ್ ಸಈದ್ ಹೇಳುತ್ತಾರೆ: ನಾನು ಒಂಬತ್ತು ಜನರ ಬಗ್ಗೆ ಅವರು ಸ್ವರ್ಗ ಪಡೆಯುವರು ಎಂಬುದರ ಬಗ್ಗೆ ಸಾಕ್ಷಿ ಹೇಳುತ್ತೇನೆ. ಇದು ಹೇಗೆ ಸಾಧ್ಯ ಎಂದು ಕೇಳಿದಾಗ ಅವರು ಹೇಳಿದರು ಒಮ್ಮೆ ನಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಯಲ್ಲಿ ಹಿರಾ ಪರ್ವತದ ಮೇಲೆ ಇದ್ದೆವು. ಆಗ ಅದು ಕಂಪಿಸಲು ತೊಡಗಿತು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಓ ಹಿರಾ ನಿಲ್ಲಿಸು. ನಿಶ್ಚಯವಾಗಿ ನಿನ್ನ ಮೇಲೆ ನಬಿ, ಸಿದ್ದೀಖ್ ಮತ್ತು ಶಹೀದ್ ಹೊರತು ಬೇರೆ ಯಾರೂ ನಿಂತಿಲ್ಲ. ಅವರು ಯಾರೆಲ್ಲಾ ಎಂದು ವಿಚಾರಿಸಿದಾಗ ಹಝ್ರತ್ ಸಈದ್ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಅಬೂಬಕರ್, ಉಮರ್, ಉಸ್ಮಾನ್, ಅಲಿ, ತಲ್‌ಹ, ಝುಬೈರ್, ಸಅದ್ ಮತ್ತು ಅಬ್ದುರ್ರಹ್ಮಾನ್ ಬಿನ್ ಔಫ್. ಸಈದ್‌ರೊಂದಿಗೆ ಕೇಳಲಾಯಿತು, ಹತ್ತನೆಯವ ಯಾರು? ಆಗ ಅವರು ಸ್ವಲ್ಪ ಹೊತ್ತು ಮೌನವಾಗಿದ್ದು ಅನಂತರ ಹೇಳಿದರು: ಹತ್ತನೆಯ ವ್ಯಕ್ತಿ ನಾನು ಎಂದು. (ಸನನ್ ತಿರ್ಮಿಝಿ ಅಬ್ವಾಬುಲ್ ಮುನಾಖಿಬ್ ಹದೀಸ್–3757)

ಹಝ್ರತ್ ಸಈದ್ ಬಿನ್ ಜುಬೈರ್ ಹೇಳುತ್ತಾರೆ: ಹಝ್ರತ್ ಅಬೂಬಕರ್, ಹಝ್ರತ್ ಉಮರ್, ಹಝ್ರತ್ ಉಸ್ಮಾನ್, ಹಝ್ರತ್ ಅಲಿ, ಹಝ್ರತ್ ತಲ್‌ಹ, ಹಝ್ರತ್ ಝುಬೈರ್, ಹಝ್ರತ್ ಸಅದ್, ಹಝ್ರತ್ ಅಬ್ದುರ್ರಹ್ಮಾನ್ ಮತ್ತು ಹಝ್ರತ್ ಸಈದ್ ಬಿನ್ ಝ್ಯೆದ್ ಇವರೆಲ್ಲರೂ ಹೇಗಿದ್ದರೆಂದರೆ ಅವರು ಯುದ್ಧ ಕ್ಷೇತ್ರದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂಭಾಗದಲ್ಲಿ ನಿಂತು ಹೋರಾಡುತ್ತಿದ್ದರು ಮತ್ತು ನಮಾಝ್‌ಗಳಲ್ಲಿ ಅವರ ಹಿಂಭಾಗದಲ್ಲಿ ನಿಂತುಕೊಳ್ಳುತ್ತಿದ್ದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–2, ಪುಟ–478, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2003)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಯಾರಿಗಾದರೂ ನಡೆದಾಡುತ್ತಿರುವ ಶಹೀದನನ್ನು ನೋಡಲು ಇಚ್ಛೆ ಇದ್ದರೆ ಅವರು ತಲ್‌ಹ ಬಿನ್ ಉಬೈದುಲ್ಲಾನನ್ನು ನೋಡಲಿ.

ಹಝ್ರತ್ ಮೂಸಾ ಬಿನ್ ತಲ್‌ಹ ಮತ್ತು ಹಝ್ರತ್ ಈಸಾ ಬಿನ್ ತಲ್‌ಹ ತಮ್ಮ ಪಿತ ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾರಿಂದ ವರದಿ ಮಾಡುತ್ತಾರೆ: ಒಬ್ಬ ಗ್ರಾಮೀಣ ಅರಬಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಕೇಳಿದನು: **ಮನ್ ಖಝಾ ನಹ್‌ಬಹೂ** ಅಂದರೆ ತನ್ನ ಪ್ರತಿಜ್ಞೆ ಈಡೇರಿಸಿದವನು ಎಂಬ ವಚನ ಯಾರಿಗೆ ಅನ್ವಯಿಸುತ್ತದೆ? ಆ ವ್ಯಕ್ತಿಯು ರಸೂಲುಲ್ಲಾಹ್(ಸ) ಅವರೊಂದಿಗೆ ಪ್ರಶ್ನಿಸಿದನು. ಅದಕ್ಕೆ ರಸೂಲುಲ್ಲಾಹ್(ಸ) ಉತ್ತರ ನೀಡಲಿಲ್ಲ. ಮತ್ತೊಮ್ಮೆ ಅವನು ಪ್ರಶ್ನಿಸಿದಾಗ ಪ್ರವಾದಿ(ಸ) ಉತ್ತರ ನೀಡಲಿಲ್ಲ ಹೀಗೆ ಅ ವ್ಯಕ್ತಿ ಮೂರು ಸಾರಿ ಈ ಪ್ರಶ್ನೆ ಕೇಳಿದನು. ಆಗಲೂ ಸಹ ಪ್ರವಾದಿ(ಸ) ಉತ್ತರಿಸಲಿಲ್ಲ. ಹಝ್ರತ್ ತಲ್‌ಹ(ರ) ಹೇಳುತ್ತಾರೆ: ನಾನು ಮಸೀದಿಯ ಬಾಗಿಲಿಗೆ ಬಂದೆನು. ಆಗ ನಾನು ಹಸಿರು ಬಣ್ಣದ ಉಡುಪು ಧರಿಸಿದ್ದೆನು ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ತಲ್‌ಹರವರ ಕಡೆಗೆ ಸೂಚಿಸಿ ಹೇಳಿದರು: ಆ ಪ್ರಶ್ನೆ ಕೇಳುತ್ತಿರುವವ ಎಲ್ಲಿದ್ದಾನೆ? ಆ ವ್ಯಕ್ತಿ ಹೇಳಿದನು ಎಲೈ ಪ್ರವಾದಿವರ್ಯರೇ! ನಾನು ಇಲ್ಲಿದ್ದೇನೆ. ಹಝ್ರತ್ ತಲ್‌ಹ(ರ) ಹೇಳುತ್ತಾರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನನ್ನ ಕಡೆಗೆ ಸೂಚಿಸಿ ಹೇಳಿದರು: ಈ ವ್ಯಕ್ತಿ **ಮನ್ ಖಝಾ ನಹ್‌ಬಹೂ** ಎಂಬ ವಚನ ಅನ್ವಯಿಸುವ ವ್ಯಕ್ತಿಯಾಗಿದ್ದಾರೆ. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ–3, ಪುಟ–86, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಅಬ್ದುರ್ರಹ್ಮಾನ್ ಬಿನ್ ಉಸ್ಮಾನ್ ಹೇಳುತ್ತಾರೆ: ಒಮ್ಮೆ ನಾವು ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾರ ಜೊತೆಗಿದ್ದೆವು. ನಾವು ಇಹ್‌ರಾಮ್ ಪೋಷಾಕು ಧರಿಸಿದ್ದೆವು. ಆಗ ಒಬ್ಬನು ಬೇಯಿಸಿದ ಪಕ್ಷಿಯನ್ನು ಪಾರಿತೋಷಿಕವಾಗಿ ತಂದನು. ಹಝ್ರತ್ ತಲ್‌ಹ(ರ) ರವರು ಆ ಸಂದರ್ಭದಲ್ಲಿ ಮಲಗಿದ್ದರು. ನಮ್ಮಲ್ಲಿ ಕೆಲವರು ಅದನ್ನು ತಿಂದರು ಮತ್ತೆ ಕೆಲವರು ಅದನ್ನು ತಿನ್ನಲಿಲ್ಲ. ಹಝ್ರತ್ ತಲ್‌ಹ ಅದರಿಂದ ತಿಂದು ಹೇಳಿದರು: ನಾವು ಇಹ್‌ರಾಮ್ ಪೋಷಾಕು ಧರಿಸಿದ್ದಾಗ ಅನ್ಯರು ಶಿಕಾರಿ ಮಾಡಿದ ಮೃಗಗಳ ಮಾಂಸವನ್ನು

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಪಸ್ಥಿತರಿರುವಾಗ ತಿನ್ನುತ್ತಿದ್ದೆವು. (ಮಸ್‌ನದ್ ಅಹ್ಮದ್ ಬಿನ್ ಹಂಬಲ್ ಸಂಪುಟ–3, ಪುಟ–7, ಹದೀಸ್–1383, ಮುಅಸ್ಸಸುತ್ತಿಸಾಲ 2001)

ಹಝ್ರತ್ ಉಮರ್(ರ) ಬಿಡುಗಡೆ ಗೊಳಿಸಿದ ಗುಲಾಮನಾದ ಅಸ್‌ಲಮ್ ವರದಿ ಮಾಡುತ್ತಾರೆ: ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾ ಧರಿಸಿದ ಇಹ್‌ರಾಮಿನ ಎರಡು ಬಟ್ಟೆಗಳು ಕೆಂಪು ಮಣ್ಣಿನಿಂದ ಬಣ್ಣ ಪಡೆದಿದ್ದುವು. ಅದನ್ನು ಹಝ್ರತ್ ಉಮರ್(ರ) ನೋಡಿದಾಗ ಹೇಳಿದರು: ಓ ಸಹಾಬರೇ ನೀವೆಲ್ಲರೂ ಇಮಾಮರಾಗಿದ್ದೀರಿ, ಜನರು ನಿಮ್ಮನ್ನು ನೋಡಿ ಅನುಕರಣೆ ಮಾಡುತ್ತಾರೆ. ಯಾರಾದರೂ ಅಜ್ಞಾನಿ, ತಮ್ಮ ದೇಹದಲ್ಲಿ ಈ ಇಹ್‌ರಾಮ್ ಬಟ್ಟೆಗಳನ್ನು ನೋಡಿ ಹೇಳುವನು ತಲ್‌ಹ ಬಣ್ಣದ ಬಟ್ಟೆಗಳನ್ನು ಇಹ್‌ರಾಮ್ ಬಟ್ಟೆಗಳಾಗಿ ಧರಿಸುತ್ತಾರೆ ಎಂದು. ಇನ್ನೊಂದು ವರದಿಯಲ್ಲಿ ಹೀಗಿದೆ: ಹಝ್ರತ್ ಉಮರ್(ರ) ಹೇಳುತ್ತಾರೆ ಇಹ್‌ರಾಮ್ ಬಟ್ಟೆಗಳಿಗಾಗಿ ಧರಿಸಲು ಅತ್ಯುತ್ತಮವಾಗಿರುವುದು ಬಿಳಿ ಬಟ್ಟೆಗಳಾಗಿವೆ. ಆದುದರಿಂದ ಜನರನ್ನು ಸಂಶಯಪಡುವಂತೆ ಮಾಡಬೇಡಿರಿ.

ಹಝ್ರತ್ ಹಸನ್(ರ) ಅವರಿಂದ ವರದಿ ಆಗಿದೆ ಹಝ್ರತ್ ತಲ್‌ಹ ಬಿನ್ ಉಬೈದುಲಾ(ರ) ಅವರು ತಮ್ಮ ಒಂದು ಭೂಮಿಯನ್ನು ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಅವರಿಗೆ ಏಳು ಲಕ್ಷ ದಿರ್‌ಹಮ್‌ನಲ್ಲಿ ಮಾರಿದ್ದರು. ಹಝ್ರತ್ ಉಸ್ಮಾನ್(ರ) ಇದರ ಮೊತ್ತವನ್ನು ಪಾವತಿಸಿದರು. ಹಝ್ರತ್ ತಲ್‌ಹ(ರ) ಈ ಹಣ ತಮ್ಮ ಮನೆಗೆ ತೆಗೆದುಕೊಂಡು ಹೋದಾಗ ಹೇಳಿದರು: ಒಂದು ವೇಳೆ ಓರ್ವ ವ್ಯಕ್ತಿಯ ಬಳಿ ಇಷ್ಟು ಹಣವಿದ್ದರೆ ರಾತ್ರಿಯ ಹೊತ್ತು ಅಲ್ಲಾಹನಿಂದ ಯಾವ ಆದೇಶ ಬರುವುದೋ ಗೊತ್ತಿಲ್ಲ. ಜೀವ ಮತ್ತು ಮೃತ್ಯುವಿನ ಅರಿವಿಲ್ಲ. ಆದ್ದರಿಂದ ಹಝ್ರತ್ ತಲ್‌ಹ(ರ) ಆ ರಾತ್ರಿ ಹೇಗೆ ಕಳೆದರು ಎಂದರೆ ಓರ್ವ ಕರೆ ನೀಡುವವ ಆ ಸಂಪತ್ತನ್ನು ತೆಗೆದುಕೊಂಡು ಮದೀನದ ಓಣಿಗಳಲ್ಲಿ ಅವಶ್ಯಕತೆ ಇರುವವರಿಗೆ ನೀಡಲು ಬೆಳಗ್ಗಿನ ತನಕ ಓಡಾಡುತ್ತಿದ್ದನು. ಬೆಳಗ್ಗಿನ ತನಕ ಅವನ ಕೈಯಲ್ಲಿ ಒಂದು ದಿರ್‌ಹಮ್ ಸಹ ಉಳಿಯಲಿಲ್ಲ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–164–165, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್)

ಇಬ್ನೆ ಜರೀರ್ ವರದಿ ಮಾಡುತ್ತಾರೆ: ಹಝ್ರತ್ ತಲ್‌ಹ(ರ) ಹಝ್ರತ್ ಉಸ್ಮಾನ್(ರ) ಅವರಿಗೆ ಅವರು ಮಸೀದಿಯಿಂದ ಹೊರಬರುತ್ತಿರುವಾಗ ಭೇಟಿಯಾದರು. ಹಝ್ರತ್ ತಲ್‌ಹ(ರ) ಹೇಳಿದರು ನನ್ನಲ್ಲಿ ನಿಮ್ಮ ಐವತ್ತು ಸಾವಿರ ದಿರ್‌ಹಮ್ ಹಣವಿತ್ತು ಅದನ್ನು ನಾನು ಪಡೆದುಕೊಂಡಿದ್ದೇನೆ. ತಾವು ಯಾರನ್ನಾದರು ನನ್ನ ಬಳಿ ಕಳುಹಿಸಿ ಅದನ್ನು ಪಡೆದುಕೊಳ್ಳಿ ಎಂದರು. ಅಂದರೆ ಒಮ್ಮೆ ಅವರು ಹಝ್ರತ್ ಉಮರ್(ರ) ಅವರಿಂದ ಹಣ ಪಡೆದಿದ್ದರು. ಈಗ ಹಝ್ರತ್ ತಲ್‌ಹ(ರ) ಅವರ ಬಳಿ ಆ ಹಣದ ವ್ಯವಸ್ಥೆ ಆಗಿದೆ ಯಾರನ್ನಾದರು ಕಳುಹಿಸಿ ಅದನ್ನು ವಾಪಸ್ ಪಡೆದುಕೊಳ್ಳಿ ಎಂದರು. ಅದಕ್ಕೆ ಹಝ್ರತ್ ಉಸ್ಮಾಮ್(ರ) ಹೇಳಿದರು: ನಿಮ್ಮ ಮಾನವೀಯತೆಯ ಕಾರನಾದ ತಮಗೆ ನಾನು ಅದನ್ನು ಪಾರಿತೋಷಕವಾಗಿ ನೀಡಿದ್ದೇನೆ ಎಂದರು.( ಅಲ್ ಬಿದಾಯ ವನ್ನಿಹಾಯ ಲಿಇಬ್ನೆ ಅಸೀರ್ ಸಂಪುಟ–4, ಭಾಗ–7, ಪುಟ–208, 35 ಹಿಜರಿ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಜಮಲ್ ಯುದ್ಧದಲ್ಲಿ ಹಝ್ರತ್ ತಲ್‌ಹ ಶಹೀದರಾದರು. ಇದರ ಬಗ್ಗೆ ಒಂದು ವರದಿ ಹೀಗಿದೆ: ಖೈಸ್ ಬಿನ್ ಅಬೂ ಹಾಝಿಮ್ ವರದಿ ಮಾಡುತ್ತಾರೆ: ಜಮಲ್ ಯುದ್ಧದಲ್ಲಿ ಮರ್‌ವಾನ್ ಬಿನ್ ಹಕಮ್ ಎಂಬವನು ಬಾಣ ಪ್ರಯೋಗ ಮಾಡಿ ಹಝ್ರತ್ ತಲ್‌ಹರ ಮೊಣಕಾಲನ್ನು ಗಾಯಗೊಳಿಸಿದಾಗ ಅದರಿಂದ ರಕ್ತ ಹರಿಯಲು ತೊಡಗಿತು. ಕೈಯಿಂದ ಒತ್ತಿ ಹಿಡಿದಾಗ ರಕ್ತ ಹರಿಯುವುದು ನಿಲ್ಲುತ್ತಿತ್ತು. ಆದರೆ ಕೈ ಬಿಟ್ಟಾಗ ರಕ್ತ ಪುನಃ ಹರಿಯಲು ಪ್ರಾರಂಭಿಸುತ್ತಿತ್ತು. ಹಝ್ರತ್ ತಲ್‌ಹ ಹೇಳಿದರು: ಅಲ್ಲಾಹನ ಆಣೆ! ಇಷ್ಟರ ತನಕ ಈ ಜನರ ಬಾಣ ನಮ್ಮ ಬಳಿಗೆ ಬಂದಿರಲಿಲ್ಲ. ಅನಂತರ ಹೇಳಿದರು: ಗಾಯವನ್ನು ಬಿಟ್ಟು ಬಿಡಿರಿ. ಈ ಬಾಣವನ್ನು ಅಲ್ಲಾಹನೇ ಕಳುಹಿಸಿದ್ದಾನೆ.

ಹಝ್ರತ್ ತಲ್‌ಹ ಜಮಲ್ ಯುದ್ಧದಲ್ಲಿ ಹಿಜರಿ ವರ್ಷ 36 ಜಮಾದಿಸ್ಸಾನಿ ದಿನಾಂಕ 10ರಂದು ಶಹೀದರಾದರು. ಆಗ ಅವರ ಪ್ರಾಯ 64 ಆಗಿತ್ತು, ಇನ್ನೊಂದು ವರದಿ ಪ್ರಕಾರ ಅವರ ಪ್ರಾಯ 62 ಆಗಿತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–167–168, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಸಯೀದ್ ಬಿನ್ ಮುಸಯ್ಯಿಬ್ ಅವರಿಂದ ವರದಿ ಆಗಿದೆ. ಓರ್ವ ವ್ಯಕ್ತಿ ಹಝ್ರತ್ ಅಲಿ(ರ), ಹಝ್ರತ್ ತಲ್‌ಹ(ರ) ಮತ್ತು ಹಝ್ರತ್ ಝುಬೈರ್(ರ) ಅವರ ಬಗ್ಗೆ ತಪ್ಪಾಗಿ ಮಾತನಾಡುತ್ತಿದ್ದರು. ಹಝ್ರತ್ ಸಅದ್ ಬಿನ್ ಮಾಲಿಕ್(ರ) ಅಂದರೆ ಹಝ್ರತ್ ಸಅದ್ ಬಿನ್ ಅಬಿ ವಖಾಸ್(ರ) ಅವರು ಅವನಿಗೆ ನನ್ನ ಸಹೋದರರ ಬಗ್ಗೆ ಏನನ್ನು ಹೇಳಬೇಡಿ ಎಂದು ತಡೆದರು. ಆದರು ಆತನು ಒಪ್ಪಲಿಲ್ಲ. ಹಝ್ರತ್ ಸಅದ್(ರ) ಎದ್ದು ಎರಡು ರಕತ್ ನಮಾಝ್ ನಿರ್ವಹಿಸಿದರು. ತದನಂತರ ದುಆ ಮಾಡಿದರು. ಎಲೈ ಅಲ್ಲಾಹನೇ! ಇವನು ಆಡುತ್ತಿರುವ ಮಾತುಗಳು ನಿನ್ನ ಕೋಪಕ್ಕೆ ಕಾರಣವಾದಲ್ಲಿ ನನಗೆ ಇವನ ಮೇಲೆ ಯಾವುದಾದರು ವಿಪತ್ತನ್ನು ತೋರಿಸು. ಮತ್ತು ಇವನನ್ನು ಜನರಿಗಾಗಿ ಪಾಠ ಕಲಿಯುವಿಕೆಯನ್ನಾಗಿಸು. ತದನಂತರ ಆತನು ಹೊರಗೆ ಹೊರಟಾಗ ಅವನ ಮುಂದೆ ಒಂದು ಜನರನ್ನು ಸಾಯಿಸುತ್ತ ಬರುತ್ತಿದ್ದ ಒಂಟೆ ಎದುರಾಯಿತು. ಆ ಒಂಟೆಯು ಆತನನ್ನು ಒಂದು ಕಲ್ಲು ಭಂಡೆಗೆ ಅಪ್ಪಲಿಸಿ ಆತನನ್ನು ಕೊಂದು ಹಾಕಿತು. ವರದಿಗಾರರು ಹೇಳುತ್ತಾರೆ ನಾನು ಜನರನ್ನು ಹಝ್ರತ್ ಸಅದ್(ರ) ಅವರನ್ನು ಎಲೈ ಅಬೂ ಇಸ್ಹಾಖ್! ನಿನಗೆ ಶುಭವಾಗಲಿ ನಿಮ್ಮ ದುಆ ಸ್ವೀಕರಿಸಲಾಯಿತು ಎಂದು ಹೇಳುತ್ತಾ ಹಿಂಬಾಲಿಸುತ್ತಿದ್ದುದ್ದನ್ನು ಕಂಡೆನು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ–3, ಪುಟ–88, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಅಲಿ ಬಿನ್ ಝೈದ್ ತಮ್ಮ ತಂದೆಯಿಂದ ವರದಿ ಮಾಡುತ್ತಾರೆ ಓರ್ವ ವ್ಯಕ್ತಿ ಹಝ್ರತ್ ತಲ್‌ಹ(ರ) ಅವರನ್ನು ಕನಸ್ಸಿನಲ್ಲಿ ಹೀಗೆ ಕಂಡನು: ಅದರಲ್ಲಿ ಹಝ್ರತ್ ತಲ್‌ಹ(ರ) ಹೇಳುತ್ತಿದ್ದರು ನನ್ನ ಖಬರ್ ಬೇರೆ ಜಾಗಕ್ಕೆ ಸರಿಸಿರಿ. ನನಗೆ ನೀರು ಬಹಳ ತೊಂದರೆ ನೀಡುತ್ತಿದೆ. ಅದೇ ರೀತಿ ಮತ್ತೊಮ್ಮೆ ಅವರನ್ನು ಕನಸ್ಸಿನಲ್ಲಿ ಕಂಡೆನು. ಹೀಗೆ ಅವರು ಮೂರು ಸಲ ಅವರನ್ನು ತಮ್ಮ ಕನಸ್ಸಿನಲ್ಲಿ ಕಂಡಾಗ ಆತನು ಹಝ್ರತ್ ಇಬ್ನೆ ಅಬ್ಬಾಸ್(ರ) ಅವರ ಬಳಿ ಬಂದು ತಮ್ಮ ಕನಸ್ಸನ್ನು ವಿವರಿಸಿದನು. ಅಗ ಜನರು ಅಲ್ಲಿಗೆ ಹೋಗಿ ನೋಡಿದಾಗ ಅವರ ಖಬರ್‌ನ ಆ ಭಾಗವೂ ನೀರಿನ ಕಾರಣದಿಂದ ಹಸಿರಾಗಿತ್ತು. ತದನಂತರ ಜನರು ಹಝ್ರತ್ ತಲ್‌ಹ(ರ) ಅವರನ್ನು ಅವರ ಗೋರಿಯಿಂದ ತೆಗೆದು ಬೇರೆ ಕಡೆ ಮತ್ತೆ ದಫನ್ ಮಾಡಿದರು. ವರದಿಗಾರರು ಹೇಳುತ್ತಾರೆ: ನಾನು ಅವರ ಎರಡು ಕಣ್ಣುಗಳ ಮೇಲಿರಿಸಿದ ಕರ್ಪೂರವನ್ನು ಹಾಗೆಯೇ ಇರಿಸಿರುವುದನ್ನು ಕಾಣುತ್ತಿದ್ದೇನೆ. ಅದರಲ್ಲಿ ಯಾವ ಬದಲಾವಣೆ ಕಾಣಲಿಲ್ಲ. ಕೇವಲ ಅವರ ಕೂದಲಲ್ಲಿ ಸ್ವಲ್ಪ ಬದಲಾವಣೆ ಆಗಿತ್ತು. ಜನರು ಹಝ್ರತ್ ಅಬೂಬಕ್ಕರ್(ರ) ಅವರ ಮನೆಗಳಲ್ಲಿ ಒಂದನ್ನು ಹತ್ತು ದಿರ್‌ಹಮ್ ನೀಡಿ ಖರೀದಿಸಿ ಅಲ್ಲಿ ಹಝ್ರತ್ ತಲ್‌ಹ(ರ) ಅವರನ್ನು ದಫನ್ ಮಾಡಿದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಭಾಗ–3, ಪುಟ–88, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ತಲ್‌ಹಾ ಬಿನ್ ಉಬೈದುಲ್ಲಾರಿಗೆ ಇರಾಖ್‌ನಲ್ಲಿದ್ದ ಜಮೀನುಗಳಿಂದ ನಾಲ್ಕೈದು ಲಕ್ಷ ದೀನಾರ್ ಬೆಲೆಬಾಳುವ ಧಾನ್ಯ ಲಭಿಸುತ್ತಿತ್ತು. ಸರಾ ಎಂಬ ಪ್ರದೇಶದ ಜಮೀನನಂದ ಹತ್ತು ಸಾವಿರ ದೀನಾರ್ ಬೆಲೆಬಾಳುವ ಧಾನ್ಯ ಸಿಗುತ್ತಿತ್ತು. ಬನೂ ತಯ್ಯಿಮ್ ಗೋತ್ರದ ಯಾವ ಬಡವನ ಕುಟುಂಬ ಸಹ ಹಝ್ರತ್ ತಲ್‌ಹರಿಂದ ಸಹಾಯ ಪಡೆಯದವರಾಗಿ ಇರಲಿಲ್ಲ. ಹಝ್ರತ್ ತಲ್‌ಹ ಆ ಗೋತ್ರದ ಎಲ್ಲಾ ವಿಧವೆಯರಿಗೆ ವಿವಾಹ ಮಾಡಿಸಿದರು. ನಿಸ್ಸಹಾಯಕ ಜನರಿಗೆ ಸಹಾಯವನ್ನು ನೀಡಿದರು. ಸಾಲಗಾರರ ಸಾಲಗಳನ್ನು ಮರುಪಾವತಿ ಮಾಡಿದರು. ಅವರಿಗೆ ಪ್ರತಿ ವರ್ಷ ಧಾನ್ಯದ ಆದಾಯ ಲಭಿಸುತ್ತಿದ್ದಾಗ ಹಝ್ರತ್ ಆಯಿಶ(ರ) ರಿಗೆ ಹತ್ತು ಸಾವಿರ ದಿರ್‌ಹಮ್ ಪಾರಿತೋಷಿಕವಾಗಿ ಕಳುಹಿಸುತ್ತಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–166, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990, ಫರ್‌ಹಂಗ್ ಸೀರತ್, ಸಯ್ಯದ್ ಫಝ್ಲುರ್ರಹ್ಮಾನ್ ಪುಟ–147, ಝುವಾರಿ ಅಕಾಡಮಿ ಪಬ್‌ಲಿಕೇಷನ್ ಕರಾಚಿ 2003)

ಹಝ್ರತ್ ಮುಆವಿಯ ಹಝ್ರತ್ ತಲ್‌ಹರ ಪುತ್ರ ಮೂಸಾ ಬಿನ್ ತಲ್‌ಹರೊಂದಿಗೆ ವಿಚಾರಿಸಿದರು: ಹಝ್ರತ್ ತಲ್‌ಹ ಶಹೀದರಾದಾಗ ಎಷ್ಟು ಸಂಪತ್ತು ಬಿಟ್ಟು ಹೋದರು ಎಂದು. ಆಗ ಅವರು ಹೀಗೆ ಉತ್ತರ ನೀಡಿದರು: 22 ಲಕ್ಷ ದಿರ್‌ಹಮ್ ಮತ್ತು ಎರಡು ಲಕ್ಷ ದೀನಾರ್. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಬಾಗ–3, ಪುಟ–166, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ತಲ್‌ಹರು ಜಮಲ್ ಯುದ್ಧದಲ್ಲಿ ಶಹೀದರಾದರು. ಅದರ ಬಗ್ಗೆ ಮುಂದೆ ಇನ್‌ಶಾ ಅಲ್ಲಾಹ್ ವಿವರಿಸುವೆನು.

ನಾನು ಕಳೆದ ವಾರದ ಖುತ್‌ಬದಲ್ಲಿ ಪ್ರಸ್ತಾಪಿಸಿದ ಹಾಗೆ ಸಾಂಕ್ರಾಮಿಕ ರೋಗವಾದ ಕೊರೋನ ವೈರಸ್ ವಿರುದ್ಧ ಮುಂಜಾಗ್ರತೆ ಕ್ರಮಗಳನ್ನು ಜಾರಿಯಲ್ಲಿರಿಸಿರಿ. ಮಸ್‌ಜಿದ್‌ಗೆ ಆಗಮಿಸುವಾಗ ಸಹ ಬಹಳ ಜಾಗರೂಕತೆ ವಹಿಸಿರಿ. ಸ್ವಲ್ಪಮಾತ್ರ ಜ್ವರ ಇದ್ದರೂ ಜನರು ಜಮಾಯಿಸುವ ಸ್ಥಳಗಳಿಗೆ ಹೋಗಬೇಡಿರಿ. ನೀವು ನಿಮ್ಮನ್ನು ರಕ್ಷಿಸಿಕೊಳ್ಳಿರಿ, ಅನ್ಯರನ್ನೂ ರಕ್ಷಿಸಲು ಪ್ರಯತ್ನಿಸಿರಿ. ಪ್ರಾರ್ಥನೆಗಳ ಕಡೆಗೆ ಬಹಳ ಗಮನ ಹರಿಸಿರಿ. ಅಲ್ಲಾಹನು ಲೋಕವನ್ನು ವಿಪತ್ತಿನಿಂದ ರಕ್ಷಿಸುವವನಾಗಲಿ – ಆಮೀನ್.

***************************

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ)*

ಸಂಪೂರ್ಣ ಲೌಕಿಕತೆಗೆ ವಾಲುವುದೂ ಬೇಡ. ಧರ್ಮದ ಹೆಸರಿಲ್ಲದಂತಹ ರೂಢಿಗಳೂ ಬೇಡ. ಆದ್ದರಿಂದ ಮಧ್ಯಮ ಗತಿಯನ್ನು ಅನುಸರಿಸುವಂತೆ ಉಪದೇಶಿಸಿದರು. ಮಹಿಳೆಯರ ಅತಿ ಹೆಚ್ಚು ಆರಾಧನೆ ಪುರುಷರು ಅವರ ಬಗ್ಗೆ ದೂರು ನೀಡಲು ಕಾರಣವಾಗಿತ್ತು. ಈ ಪರಿಸರವು ಆ ಜನರ ಸ್ಥಿತಿ ಬದಲಾಯಿಸಿಬಿಟ್ಟಿತ್ತು. ಮಹಿಳೆಯರಿಗೂ ದೂರು ನೀಡಲು ಕಾರಣವಾಗಿದ್ದು, ನಮ್ಮ ಪುರುಷರು ದಿನವೆಲ್ಲ ವ್ರತ (ಉಪವಾಸ) ಹೊಂದುತ್ತಾರೆ ಮತ್ತು ರಾತ್ರಿಗಳು ಆರಾಧನೆಯಲ್ಲಿ ಕಳೆಯುತ್ತಾರೆ ಎಂದು. ಒಂದು ವರದಿ ಹೀಗೂ ಬರುತ್ತದೆ. ಒಂದು ಸಂದರ್ಭದಲ್ಲಿ ಓರ್ವ ಸಹಾಬಿಯು ಎಂತಹ ರೂಪ ಧರಿಸಿದ್ದಳೆಂದರೆ ಅವರಿಗೆ ತಮ್ಮ ಅರಿವು ಇರಲಿಲ್ಲ. ಬಟ್ಟೆಗಳು ಹೊಲಸಾಗಿದ್ದವು. ಬಟ್ಟೆಯ ಕಡೆ ಗಮನವಿರಲಿಲ್ಲ. ಕೂದಲುಗಳನ್ನು ಬಾಚಿಕೊಳ್ಳುತ್ತಿರಲಿಲ್ಲ. ಕಾಲಕ್ಕನುಗುಣವಾಗಿ ಶೃಂಗಾರವು ಇರಲಿಲ್ಲ. ಆಗ ಹಝ್ರತ್ ರಸೂಲುಲ್ಲಾಹ್(ಸ) ರವರ ಓರ್ವ ಧರ್ಮಪತ್ನಿ ಅವರ ಬಳಿಗೆ ಬಂದಾಗ ಕೇಳಿದರು. "ಇದೇನು ನಿಮ್ಮ ಅವಸ್ಥೆ"? ಆಗ ಅವರ ಉತ್ತರಿಸಿದರು ನಾನು ತಯಾರಾಗುವುದು, ತಮ್ಮ ರೂಪ ಸರಿಪಡಿಸಿಕೊಳ್ಳುವುದು ಯಾರಿಗೋಸ್ಕರ, ನನ್ನ ಪತಿ ರಾತ್ರಿಗಳೆಲ್ಲ ಅಲ್ಲಾಹನ ಆರಾಧನೆಗಳಲ್ಲಿ ಕಳೆಯುತ್ತಾರೆ. ಹಗಲಲ್ಲಿ ಉಪವಾಸವಿರುತ್ತಾರೆ. ನನ್ನ ಕಡೆ ಅವರ ಗಮನವೇ ಇರುವುದಿಲ್ಲ. ಆಗ ಹಝ್ರತ್ ರಸೂಲುಲ್ಲಾಹ್(ಸ) ರವರ ಧರ್ಮಪತ್ನಿ ಹಝ್ರತ್ ರಸೂಲುಲ್ಲಾಹ್(ಸ) ರವರ ಬಳಿ ಈ ವಿಷಯ ಪ್ರಸ್ತಾಪಿಸಿದರು ಆಗ ರಸೂಲುಲ್ಲಾಹ್(ಸ) ರವರು ಆ ವ್ಯಕ್ತಿಯನ್ನು ಕರೆಯಿಸಿಕೊಂಡು ಹೇಳಿದರು. "ನಿಮ್ಮ ಪತ್ನಿಯ ಮೇಲೂ ನಿಮ್ಮ ಹಕ್ಕಿದೆ. ಅವರು ಹೇಳಿದರು. ನಾನು ನಿಮಗಿಂತ ಹೆಚ್ಚು ಅಲ್ಲಾಹನ ಸಮೀಪವಾಗಿದ್ದೇನೆ. ಉಪವಾಸ ಇರುತ್ತೇನೆ. ಮಕ್ಕಳ ಹಕ್ಕುಗಳನ್ನು ಪಾಲಿಸುತ್ತೇನೆ. ಪತ್ನಿಯರ ಹಕ್ಕುಗಳನ್ನು ಪಾಲಿಸುತ್ತೇನೆ. ಸಮಾಜದ ಹಕ್ಕುಗಳನ್ನು ಪಾಲಿಸುತ್ತೇನೆ. ಆದ್ದರಿಂದ ನೀವೂ ತನ್ನ ಪತ್ನಿ ಮಕ್ಕಳ ಹಕ್ಕುಗಳನ್ನು ಪಾಲಿಸಿರಿ. ಅದಾದ ಮೇಲೆ ಕೆಲ ಅವಧಿ ನಂತರ ಅದೇ ದುರಾವಸ್ಥೆಯಲ್ಲಿದ್ದ ಸಹಾಬಿಯು ಒಂದು ಸಂಧರ್ಭದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರವರ ಧರ್ಮಪತ್ನಿಯರ ಬಳಿಗೆ ಬಂದರು. ಆಗ ತುಂಬ ತಯಾರಾಗಿ ಒಳ್ಳೆಯ ಬಟ್ಟೆಗಳನ್ನು ಧರಿಸಿ, ಸುಗಂಧ ಲೇಪಿಸಿಕೊಂಡು ಬಂದಿದ್ದರು. ಅವರು ಕೇಳಿದರು. ಇಂದು ನೀವು ತುಂಬ ಶೃಂಗರಿಸಿಕೊಂಡು ಬಂದಿದ್ದೀರಿ. ಏನು ಕಾರಣ? ಆ ಸಹಾಬಿ ಹೇಳಿದರು. ಹಝ್ರತ್ ರಸೂಲುಲ್ಲಾಹ್(ಸ) ರವರು ಉಪದೇಶ ಮಾಡಿದಾಗಿನಂದ ನನ್ನ ಪತಿಯೂ ನನ್ನ ಕಡೆ ಗಮನಹರಿಸಿದ್ದಾರೆ.

ಹುಝೂರ್(ಅಬಿಅ) ಹೇಳಿದರು. ಆದ್ದರಿಂದ ತಮ್ಮ ಜನ್ಮದ ಉದ್ದೇಶವನ್ನು ಪೂರ್ಣಗೊಳಿಸಲು ತನ್ನ ಸಂತಾನಗಳನ್ನು ವಿನಾಶದಿಂದ ರಕ್ಷಿಸಲು, ಅವರನ್ನು ಅಲ್ಲಾಹನ ಸಮೀಪ ತರಲು ನಮಗೆ ನಮ್ಮ ಗುಣಗಳನ್ನು ಸುಧಾರಿಸಿಕೊಳ್ಳುವ ಅಗತ್ಯವಿದೆ. ನಾನು ನಿನ್ನೆಯ ಖುತುಬಾದಲ್ಲಿ ಈ ಕಡೆ ಗಮನ ಸೆಳೆದಿದ್ದೆ, ಪುರುಷರಿಗೆ ಐದು ಹೊತ್ತಿನ ನಮಾಝುಗಳನ್ನು ಮಸೀದಿಗೆ ಬಂದು ಜಮಾಅತ್‌ನೊಂದಿಗೆ ನಿರ್ವಹಿಸುವ ಆಜ್ಞೆ ಇದೆ. ಆದರೆ ಮಹಿಳೆಯರಿಗೆ ಮನೆಗಳಲ್ಲಿಯೇ ನಮಾಝ್ ಮಾಡಲು ಅನುಮತಿ ಇದೆ. ಅವರಿಗೆ ಪುಣ್ಯವು ಪುರುಷರು ಮಸೀದಿಗೆ ಹೋಗಿ ನಮಾಝ್ ನಿರ್ವಹಿಸುವ ಸಮಾನವೇ ಆಗಿರುತ್ತದೆ. ಆದ್ದರಿಂದ ಈ ವಿನಾಯಿತಿಯಿಂದ ಪ್ರಯೋಜನ ಪಡೆಯದಿರುವುದು ನಿಮ್ಮ ದೌರ್ಭಾಗ್ಯವಲ್ಲದಿದ್ದರೆ ಮತ್ತೇನು? ಕಾಲದ ಇಮಾಮರನ್ನು ನಂಬಿದ ಓರ್ವ ಅಹ್ಮದಿ ಸ್ತ್ರೀಯು ಪ್ರಸಕ್ತ ಕಾಲದ ದುಷ್ಕರ್ಮಗಳಿಂದ ರಕ್ಷಿಸಿಕೊಳ್ಳಲು ಅಲ್ಲಾಹನನ್ನು ಆರಾಧಿಸುವವಳಾಗಬೇಕಾಗಿದೆ. ಅಲ್ಲಾಹನನ್ನು ಆರಾಧಿಸುವವನಾಗಬೇಕಾಗಿದೆ. ಅವನಿಗೆ ಭಕ್ತಿಯ ಹಕ್ಕನ್ನು ನೀಡಬೇಕಾಗಿದೆ. ನೀವು ಅಲ್ಲಾಹನನ್ನು ಆರಾಧಿಸುವಾಗ ಭಕ್ತಿಯುಳ್ಳವರಾಗಬೇಕು. ಇತರ ಸತ್ಕರ್ಮಗಳನ್ನು ಮಾಡುವ ಭಾಗ್ಯ ದೊರೆಕಿದಾಗಲೇ ನಾನು ಅಲ್ಲಾಹನ ಮತ್ತು ಅವನ ಪ್ರವಾದಿಗೆ ಪರಿಪೂರ್ಣ ವಿಧೇಯನಾಗಬೇಕೆಂಬ ಭಾವನೆ ಮಾಡುವುದು. ಆಗ ನೀವು ಖಾನಿತಾತ್‌ನಲ್ಲಿ ಪರಿಗಣಿಸುವುರಾಗುವಿರಿ. ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. ಸ್ತ್ರೀಯು ತನ್ನ ಮನೆ, ತನ್ನ ಪತಿಯ ಮನೆಯ ಉಸ್ತುವಾರಿ ವಹಿಸಿಕೊಳ್ಳುವವರಾಗುತ್ತಾಳೆ. ಅವಳು ಅವನ ಅನುಪಸ್ಥಿತಿಯಲ್ಲಿ ಮನೆಯ ರಕ್ಷಣೆಯ ಜವಾಬ್ದಾರರಾಗಿರುತ್ತಾಳೆ ಆದ್ದರಿಂದ ಸಂತಾನದ ತರಬೇತಿಯ ಜವಾಬ್ದಾರಿ ಸ್ತ್ರೀಯ ಮೇಲೆ ಅತ್ಯಧಿಕವಾಗಿ ಹಾಕಲಾಗಿದೆ. ಪತಿಯು ಹೊರಗಿನ ಕೆಲಸ ಕಾರ್ಯಗಳಲ್ಲಿ ತೊಡಗಿರುತ್ತಾನೆ. ಮನೆಯಲ್ಲಿ ಇಲ್ಲದಿರುವಾಗ ಸ್ತ್ರೀಯೇ ಉಸ್ತುವಾರಿಯಾಗಿರುತ್ತಾಳೆ. ಮಕ್ಕಳು ಶಾಲೆಯಿಂದ ಮರಳಿ ಮನೆಗೆ ಬರುವಾಗ ಮನೆಯಲ್ಲಿ ಸ್ತ್ರೀಯ ಉಪಸ್ಥಿತಿ ಅನಿವಾರ್ಯವಾಗಿದೆ. ಏಕೆಂದರೆ ಅವರ ಆಹಾರ ಉಪಹಾರದ ಬಗ್ಗೆ ಗಮನ ಕೊಡಬೇಕಾಗುತ್ತದೆ ಮತ್ತು ಶಾಲೆಯ ಪರಿಸ್ಥಿತಿಗಳ ಬಗ್ಗೆಯೂ ವಿಚಾರಿಸಬೇಕು ಮತ್ತು ಇತರ ತರಬೇತಿ ವಿಷಯಗಳ ಕುರಿತು ಅವರಿಗೆ ಅರಿವು ನೀಡಬೇಕು.

ಹುಝೂರ್ ಅನ್ವರ್(ಅಬಿಅ) ಹೇಳಿದರು. ಆದ್ದರಿಂದ ಅಹ್ಮದಿ ತಾಯಿಯರು ಪ್ರಸಕ್ತ ಸಮಯದಲ್ಲಿ ಪ್ರಯತ್ನಿಸಬೇಕಾಗಿರುವುದೇನೆಂದರೆ ಅವರು ತಮ್ಮ ಮಕ್ಕಳ ಭಾವನೆಗಳನ್ನು ಅರಿತು ಇಲ್ಲಿಯ ಪರಿಸರದ ಪ್ರಭಾವಗಳನ್ನು ಅರಿತು ಮಕ್ಕಳಿಗೆ ಒಳ್ಳೆಯ ಮತ್ತು ಕೆಟ್ಟದು ಯಾವುದು ಎಂಬ ಅರಿವು ಮೂಡಿಸಬೇಕಾಗುತ್ತದೆ. ಇತ್ತೀಚೆಗೆ ಇಲ್ಲಿ ಸ್ವಾತಂತ್ರ್ಯದ ಹೆಸರಿನಲ್ಲಿ ಬಾಲ್ಯದಿಂದಲೇ ಮಕ್ಕಳಿಗೆ ಸಂಬಂಧವಿಲ್ಲದ ವಿಷಯಗಳ ಬಗ್ಗೆ ಹೇಳಲಾಗುತ್ತದೆ. ಮಕ್ಕಳು ಪ್ರೌಢಾವಸ್ಥೆಗೆ ತಲುಪುವವರೆಗೆ ಇಂತಹ ವಿಷಯಗಳು ತಿಳಿಯಲು ಸಾಧ್ಯವೇ ಇಲ್ಲದಂತಹ ವಿಷಯಗಳು ಅವರಿಗೆ ಹೇಳಲಾಗುತ್ತದೆ. ವಿದ್ಯೆಯ ಹೆಸರಿನಲ್ಲಿ ಇದೆಲ್ಲ ಹೇಳಲಾಗುತ್ತದೆ. ವಿದ್ಯೆ ಎಂಬ ಬೆಳಕಿನ ಹೆಸರಿನಲ್ಲಿ ಮಕ್ಕಳಿಗೆ ಈ ಜನರು ನೈತಿಕ ಅಂಧಕಾರಗಳಲ್ಲಿ ದೂಡುವ ಪ್ರಯತ್ನ ಮಾಡುತ್ತಿದ್ದಾರೆ. ಮತ್ತು ಈ ಮಾತುಗಳನ್ನು ಕಲಿಸುತ್ತಿದ್ದಾರೆ. ಈ ಕಾರಣದಿಂದ ಮಕ್ಕಳು ನೈತಿಕತೆಯಲ್ಲಿ ನೈತಿಕ ಅಂಧಕಾರದಲ್ಲಿ ಮುಳುಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ತಾಯಂದಿರ ಜವಾಬ್ದಾರಿಯು ಮೊದಲಿಗಿಂತ ಹೆಚ್ಚಾಗಿರುತ್ತದೆ. ತಾಯಂದಿರು ತಮ್ಮ ಮನೆಯ ಉಸ್ತುವಾರಿಯನ್ನು ವಹಿಸಿಕೊಂಡು ಈ ಅನರ್ಥ ಮತ್ತು ಅಪವಿತ್ರ ವಿಷಯಗಳನ್ನು ರದ್ದುಗೊಳಿಸಲು ಮೊದಲು ಸ್ವಯಂ ತಿಳುವಳಿಕೆ ಹೊಂದಬೇಕು. ಸ್ವಯಂ ಮಾಹಿತಿಗಳನ್ನು ಕಲೆ ಹಾಕಬೇಕು. ಶಾಲೆಯಿಂದ ಕಲಿತು ಬಂದವುಗಳ ಬಗ್ಗೆ ಪ್ರಶ್ನೆ ಕೇಳಿದರೆ ಆ ಕುರಿತು ಆತಂಕಗೊಳ್ಳದೇ ಅವನು ಕೇಳಿದ ಪ್ರಶ್ನೆಗೆ, ಅವನ ಪ್ರಶ್ನೆಗಳು ಅಶ್ಲೀಲವಾಗಿದ್ದರೆ ಅವರಿಗೆ ಮನದಟ್ಟಾಗುವಂತೆ ಉತ್ತರ ನೀಡಬೇಕು. ಅದರ ಕೆಟ್ಟತನ ಎತ್ತಿ ತೋರಿಸಬೇಕು. ಇನ್ನೂ ನಿಮ್ಮ ಮನಸ್ಸು ಆ ಸ್ಥಿತಿಗೆ ಬರಲಿಲ್ಲ ಎಂದು ತಿಳಿಸಬೇಕು. ಹೀಗೆ ನಾವು ನಮ್ಮ ಮಕ್ಕಳನ್ನು ರಕ್ಷಿಸಬಹುದಾಗಿದೆ. ಇಲ್ಲದಿದ್ದರೆ ಈ ಭೌತಿಕ ವ್ಯಾಮೋಹ ಪರಿಸರ ನಮ್ಮ ಸಂತಾನವನ್ನು ನಾಶಗೊಳಿಸುವುದು.

ಹುಝೂರ್ ಅನ್ವರ್(ಅಬಿಅ) ಹೇಳಿದರು. ಆದ್ದರಿಂದ ಪ್ರತಿಯೊಬ್ಬ ಅಹ್ಮದಿಯು ಚಿಂತನಾ ಪೂರ್ವವಾಗಿ ಈ ಕಡೆ ಗಮನಹರಿಸುವ ಅಗತ್ಯವಿದೆ. ಪ್ರತಿಯೊಬ್ಬ ಅಹ್ಮದಿ ಸ್ತ್ರೀಯು ತನ್ನ ಮಾದರಿಗಳ ಮೂಲಕ ಮತ್ತು ಪ್ರಾರ್ಥನೆಗಳೊಂದಿಗೆ ಅತ್ಯಂತ ಉನ್ನತ ಮಟ್ಟದ ತರಬೇತಿ ನೀಡುವ ಅವಶ್ಯಕತೆ ಇದೆ. ಈ ಮಾತೆಯರ ಅಸ್ತಿತ್ವವು ಅಲ್ಲಾಹನ ಅನುಗ್ರಹಗಳನ್ನು ಅಪ್ಪಿಕೊಂಡು ತನ್ನ ಸಂತಾನಕ್ಕೆ ಬಂಡವಾಳ ರೂಪದಲ್ಲಿ ಜಮಾಅತಿಗೆ ನೀಡುತ್ತಿದ್ದಾರೆ ಎಂದು ಹೇಳುವಂತಾಗಬೇಕು. ಈ ಸಂತಾನ ಈ ಮಕ್ಕಳು ನಿಮ್ಮಲ್ಲಿ ಜಮಾಅತ್ತಿನ ಅಮಾನತ್ ಇದ್ದಂತೆ, ಅವರಿಗೆ ತರಬೇತಿ ನೀಡಿದ ಕಾರಣ ಇವೆಲ್ಲ ಮಕ್ಕಳು ಅಲ್ಲಾಹನ ಅಚ್ಚುಮೆಚ್ಚಿನ ಸಂಪತ್ತಾಗಿದ್ದಾರೆ. ಇಂತಹವರ ಮೇಲೆ ಅಲ್ಲಾಹನ ಪ್ರೀತಿಯ ದೃಷ್ಟಿ ಕ್ಷಣಕ್ಷಣಕ್ಕೂ ಬೀಳುತ್ತಿರುತ್ತದೆ. ಅವು ತನ್ನ ಪರಿಶುದ್ಧ ಮಾನಸಿಕತೆಯಿಂದಾಗಿ ಲೋಕದ ಮಾಲಿನ್ಯದ ಕಡೆಗೆ ದೃಷ್ಟಿ ಎತ್ತಿಯೂ ನೋಡುವುದಿಲ್ಲ. ಟಿ.ವಿ, ಇಂಟರ್‌ನೆಟ್‌ನ ಅನರ್ಥ ಮತ್ತು ದುರುದ್ದೇಶ ಹಾಗೂ ಅಶ್ಲೀಲ ಮತ್ತು ಕೆಟ್ಟ ಕಾರ್ಯಕ್ರಮಗಳ ಕುರಿತು ಲಕ್ಷ್ಯವಹಿಸುವುದಿಲ್ಲ. ಅವರಿಗೆ ಲಕ್ಷ್ಯವಿದ್ದರೆ ಅಲ್ಲಾಹನ ಅನುಗ್ರಹ ಯಾಚಿಸುವ ಕುರಿತು ಮಾತ್ರವಿದೆ. ಲೋಕವು ಹೇಳುವಂತಾಗಬೆಕು. ಈ ಮಕ್ಕಳು ಎಂತಹ ಮಕ್ಕಳಾಗಿದ್ದಾರೆಂದರೆ ಇವರಿಗೆ ದುಷ್ಕರ್ಮಗಳಲ್ಲಿ ಆಸಕ್ತಿಯಿಲ್ಲ. ಅನರ್ಥ ಮಾತುಗಳಲ್ಲಿ ಆಸಕ್ತಿ ಇಲ್ಲ. ಸಮಯ ಹಾಳು ಮಾಡುವುದರಲ್ಲಿ ಆಸಕ್ತಿ ಇಲ್ಲ. ಗೂಂಡಾಗಿರಿಯಲ್ಲಿ ಆಸಕ್ತಿ ಇಲ್ಲ. ಹೊರಗೆ ಹುಡುಗರಲ್ಲಿ ಸೇರಿ ಮಧ್ಯ ಸೇವನೆಯಲ್ಲಿ ಆಸಕ್ತಿಯಿಲ್ಲ. ಬದಲಾಗಿ ಇವರಿಗೆ ಅಲ್ಲಾಹನ ಅನುಗ್ರಹವನ್ನು ಪಡೆಯುವುದರಲ್ಲಿ ಆಸಕ್ತಿ ಇದೆ. ಚಿಂತೆಯಿದ್ದರೆ ಹಝ್ರತ್ ಮಸೀಹ್ ಮೌಊದ್(ಅ) ರೊಂದಿಗೆ ಅಲ್ಲಾಹನು ನೀಡಿದ ವಾಗ್ದಾನಗಳ ಭಾಗವಾಗುವ, ನನ್ನ ಅನುಯಾಯಿಗಳು ಜ್ಞಾನ ಸಂಪಾದನೆಯಲ್ಲಿ ಪ್ರಗತಿ ಸಾಧಿಸುವರು. ಇದು ಅಲ್ಲಾಹನ ವಾಗ್ದಾನವಾಗಿದೆ. ಪ್ರಗತಿ ಹೊಂದಿ ಲೋಕಕ್ಕೆ ಮಾರ್ಗದರ್ಶನ ನೀಡುವರು. ಲೋಕಕ್ಕೆ ದಜ್ಜಾಲಿ ದುಷ್ಕರ್ಮಗಳಿಂದ ರಕ್ಷಿಸುವವರು. ಆದ್ದರಿಂದ ಇಂತಹ ಖಜಾನೆ ಮತ್ತು ಇಂತಹವರನ್ನು ಜನ್ಮ ನೀಡುವವರಾಗಬೇಕು. ಇಂತಹ ಮೂಮೀನ್ ಪತ್ನಿಯರು ಮತ್ತು ಮಾತೆಯರು ಆಗಬೇಕು. ಅವರ ಕುರಿತು ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. ಇವರು ಅತ್ಯುತ್ತಮ ಸಂಪತ್ತಿನಲ್ಲಿ ಸೇರಿದವರಾಗಿದ್ದಾರೆ.

ಹುಝೂರ್ ಅನ್ವರ್(ಅಬಿಅ) ಹೇಳಿದರು. ಅದೇ ರೀತಿ ಮಾತೆಯರು ಇದನ್ನು ನೆನಪಿಡಬೇಕು. ಬಾಲಕಿಯರ ತರಬೇತಿಗೋಸ್ಕರ ತಾವು ಆದರ್ಶಪ್ರಾಯವಾಗಿರಬೇಕು. ವಿಶೇಷವಾಗಿ ತಮ್ಮ ವೇಷಭೂಷ ಮತ್ತು ಪರದೆಯ ಕಡೆ ಲಕ್ಷ್ಯವಹಿಸಬೇಕು. ಲಜ್ಜೆಯು ಸ್ತ್ರೀಯ ಭೂಷಣವಾಗಿದೆ. ಹುಡುಗಿಯರಿಗೆ ತಿಳಿಸಬೇಕು. ಈ ನಾಮಾಮಾತ್ರದ ಪ್ರಗತಿಪರ ಸಮಾಜವು ನಿಮ್ಮ ಲಜ್ಜೆಯ ಸುರಕ್ಷತೆ ವಹಿಸುವುದಿಲ್ಲ. ಬಾಲ್ಯದಲ್ಲಿಯೇ ತಿಳಿಸಬೇಕು. ಐದಾರು ವರ್ಷ ವಯಸ್ಸಿನಲ್ಲಿಯೇ ಹುಡುಗಿಯರಿಗೆ ತಿಳಿಸಬೇಕು. ಈ ಸಮಾಜ ನಿಮ್ಮ ಗೌರವದ ಸುರಕ್ಷತೆ ವಹಿಸುವುದಿಲ್ಲ. ಗೌರವ ಲಜ್ಜೆಯ ಸುರಕ್ಷತೆಯು ಅಲ್ಲಾಹನು ನಿರ್ದೇಶಿಸಿದ ಮಾರ್ಗದಲ್ಲಿ ನಡೆಯುವುದರಲ್ಲಿ ಅಡಗಿದೆ. ಆದ್ದರಿಂದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಪರದೆಯ ಆದೇಶ ನೀಡಿದೆ. ಮತ್ತು ಲಜ್ಜೆಯನ್ನು ಕಾಪಾಡುವ

ಆದೇಶವೂ ನೀಡಿದೆ. ಸತತವಾಗಿ ಮಕ್ಕಳಿಗೆ ತಿಳಿಸುತ್ತಿರಬೇಕು. ಅಲ್ಲಾಹನ ಈ ಆದೇಶವನ್ನು ಯಾವತ್ತೂ ತಮ್ಮ ಮುಂದಿರಿಸಿಕೊಳ್ಳಬೇಕು ಈ ವಿಷಯದಲ್ಲಿ ಹಿಂಜರಿಯುವ ಅವಶ್ಯಕತೆ ಇಲ್ಲ. ಮನಸ್ಸಿನಲ್ಲಿ ಯಾವ ಆಳಕ್ಕೂ ಇಟ್ಟುಕೊಳ್ಳಬಾರದು. ಮಾತೆಯರು ಸ್ವಯಂ ಪರದೆಯ ರಕ್ಷಣೆ ವಹಿಸಿದರೆ ಮತ್ತು ಮಕ್ಕಳಿಗೆ ಇದರ ಪ್ರಾಮುಖ್ಯತೆ ಹೇಳಿಕೊಟ್ಟರೆ ಖಂಡಿತವಾಗಿಯೂ ಇದರ ಸತ್ಪರಿಣಾಮ ಮಕ್ಕಳ ಮೇಲೆ ಆಗುವುದು.

ಹುಝೂರ್ ಅನ್ವರ್(ಅಬಿಅ) ಹೇಳಿದರು. ಕೆಲವು ವಿದ್ಯಾವಂತರಾದ ಹುಡುಗಿಯರು ತಮ್ಮ ತಾಯಂದಿರು ಪುರಾತನ ಕಾಲದವರಾಗಿದ್ದಾರೆಂದು ಭಾವಿಸುತ್ತಾರೆ. ಈ ಕಾಲಕ್ಕೆ ತಕ್ಕಂತೆ ನಡೆಯಲು ಪರದೆಯಲ್ಲಿ ಸ್ವಲ್ಪ ಮೃದುತನ ತರುವ ಅವಶ್ಯಕತೆ ಇದೆ. ಕೆಲವು ಸಂದರ್ಭಗಳಲ್ಲಿ ಪರದೆ ಮಾಡದೆ ಇರುವ ಅವಶ್ಯಕತೆ ಇರುತ್ತದೆ ಎಂಬ ವಿಷಯ ಅವರಿಗೆ ಏನು ಗೊತ್ತು? ಆದರೆ ಯಾವಾಗಲೂ ನಾವು ಈ ವಿಷಯ ನೆನಪಿಡಬೇಕಾಗಿದೆ. ಯಾರು ಅಲ್ಲಾಹನ ಆಜ್ಞೆಗಳನ್ನು ಧಿಕ್ಕರಿಸಿ ನಡೆಯುವರು. ಅವರು ತಮ್ಮ ಮತ್ತು ತಮ್ಮ ಪೀಳಿಗೆಯ ಜೀವನವನ್ನು ನಾಶಗೊಳಿಸುವರು. ಆದ್ದರಿಂದ ಯಾವ ಆತಂಕವಿಲ್ಲದೆ ಅಹ್ಮದಿ ಬಾಲಕಿ ಮತ್ತು ಸ್ತ್ರೀ ಲಜ್ಜೆಗೆಟ್ಟ ವೇಷದ ಮೇಲೆ ಶಾಪ ಹಾಕುತ್ತ ಅದನ್ನು ತಿರಸ್ಕರಿಸಬೇಕಾಗಿದೆ. ಯಾವ ವೇಷಭೂಷಣ ಲಜ್ಜೆಗೆಡುವಂತಿರುತ್ತದೆಯೋ ಅದು ಅಲ್ಲಾಹನ ಆಜ್ಞೆ ಉಲ್ಲಂಘಿಸಬೇಕಾಗಿರುತ್ತದೆ. ಕೆಲವರು ಈ ನೆಪ ಒಡ್ಡುತ್ತಾರೆ. ಕೆಲಸಕ್ಕೆ ಹೋಗಬೇಕಾದರೆ ಕೆಲವು ನಿರ್ದಿಷ್ಟ ವೇಷ ಧರಿಸಬೇಕಾಗುತ್ತದೆ. Blouse ಮತ್ತು Jeans ಇಲ್ಲದೆ ನಡೆಯುವುದಿಲ್ಲ. ಸ್ಕಾರ್ಫ್ ತೆಗೆದುಕೊಳ್ಳುವುದಿಲ್ಲ. ಮತ್ತು ಉದ್ದವಾದ ಕೋಟ್ ಧರಿಸುವುದಿಲ್ಲವಾದರೆ ಇಂತಹ ಕೆಲಸದಿಂದ ನಮ್ಮ ಹುಡುಗಿಯರು ದೂರ ಇರಬೇಕಾಗುತ್ತದೆ. ಅದು ಬೆಚ್ಚನೆಯ ವಸ್ತ್ರದ ಕಡೆ ನಮಗೆ ಆಹ್ವಾನಿತ ಕೆಲಸವಾಗಿದೆ.

ಹುಝೂರ್ ಅನ್ವರ್(ಅಬಿಅ) ನುಡಿದರು. ಅಲ್ಲಾಹನು ನಮ್ಮ ಪರಿಪಾಲಕನಾಗಿದ್ದಾನೆ ಎಂದು ವಿಶ್ವಾಸ ಹೊಂದಿ ಸಜ್ಜನರಾಗುವ ಪ್ರಯತ್ನ ಮಾಡಿದರೆ ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಸಜ್ಜನರ ಪರವಾಗಿರುತ್ತಾನೆ.

ಈ ಪರದೆಯಿಂದ ಸ್ವತಂತ್ರವಾದರೆ ಮುಂದಿನ ಪೀಳಿಗೆಗಳು ಇನ್ನು ಹೆಚ್ಚಿನ ಸ್ವಾತಂತ್ರ್ಯ ಪ್ರಿಯರಾಗುವರು ಮತ್ತು ಧರ್ಮದಿಂದ ದೂರವಾಗುವರು.

ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಅಧ್ಯಾಪನೆಯು ಸಹ ತಮ್ಮ ಮುಂದಿರಿಸಬೇಕು "ಯೂರೋಪಿನ ಮಾದರಿಯಲ್ಲಿ ಜನರು ಪರದೆ ರಹಿತರಾಗಲು ಒತ್ತು ಕೊಡುತ್ತಿದ್ದಾರೆ. ಆದರೆ ಇದು ಖಂಡಿತವಾಗಿಯೂ ಅನುಚಿತವಾಗಿದೆ. ಇದು ಖಂಡಿತವಾಗಿಯೂ ಅನುಚಿತವಾಗಿದೆ. ಇದುವೇ ಸ್ತ್ರೀಯರ ಸ್ವಾತಂತ್ರ್ಯ ಮತ್ತು ಅರಾಜಕತೆಯಾಗಬೇಕಾಗಿದೆ." ಇದು ಅಗತ್ಯಕ್ಕಿಂತ ಹೆಚ್ಚು ಸ್ವಾತಂತ್ರ್ಯಕ್ಕೆ ಪ್ರೇರಣೆ ನಿಡುತ್ತದೆ ಮತ್ತು ಇದು ಧರ್ಮದಿಂದ ದೂರ ಮಾಡುತ್ತದೆ. ಧರ್ಮಾದೇಶಗಳನ್ನು ಉಲ್ಲಂಘಿಸುವಂತೆ ಮಾಡುತ್ತದೆ. ಅದರ ಬೇರು ಸ್ವಾತಂತ್ರ್ಯವಿದೆ. ಆದ್ದರಿಂದ ಬಹಳ ಜಾಗರೂಕರಾಗಿ ಚಿಂತಿಸಿ ಹೆಜ್ಜೆ ಇಡಬೇಕಾದ ಅವಶ್ಯಕತೆ ಇದೆ.

ಹುಝೂರ್ ಅನ್ವರ್(ಅಬಿಅ) ಹೇಳಿದರು. ಆದ್ದರಿಂದ ಸದಾ ನೆನಪಿಡಿರಿ. ಅಲ್ಲಾಹನ ಮತ್ತು ಅವನ ಪ್ರವಾದಿಗಳು ಹೇಳಿದ ರೀತಿ ನಡೆದುಕೊಳ್ಳದಿದ್ದರೆ ಧರ್ಮವನ್ನು ಕಳೆದುಕೊಳ್ಳುವಿರಿ, ಮತ್ತು ನಾವು ಮಸೀಹ್ ಮೌಊದ್(ಅ) ಬೈಅತ್ ಮಾಡಿದ್ದೇವೆ ಎಂಬ ದಾವೆ ಅರ್ಥ ಹೀನವಾಗುವುದು. ಈ ಪರಿಸರದಲ್ಲಿ ನಾಚಿಕೊಳ್ಳುವ ಬದಲು ಈ ಭೌತಿಕವಾದಿಗಳಿಗೆ ದಿಟವಾಗಿ ಹೇಳಿರಿ. ಪರದೆ ನಮ್ಮ ಧಾರ್ಮಿಕ ನಂಬಿಕೆಯಾಗಿದೆ. ನೀವು ನಮ್ಮ ಧರ್ಮದಲ್ಲಿ ಹಸ್ತಕ್ಷೇಪ ಮಾಡುವುದು ಬೇಡ. ಇಲ್ಲಿಯ ವಿದ್ಯೆಗಿಂತ ಅಹ್ಮದಿ ಹುಡುಗಿಯರು ಈ ವಿಷಯವಾಗಿ ಪತ್ರಿಕೆಗಳಲ್ಲಿ ನಿರ್ಬಂದ ಬರೆಯಿರಿ.

ಹುಝೂರ್ ಅನ್ವರ್(ಅಬಿಅ) ಹೇಳಿದರು. ಸದಾ ನೆನಪಿಡಿರಿ. ಅಲ್ಲಾಹನ ಆದೇಶಾನುಸಾರ ನಡೆದುಕೊಂಡರೆ ಇಹಪರ ಎರಡರಲ್ಲೂ ಜಯಗೊಳಿಸುವಿರಿ. ಆದ್ದರಿಂದ ಸ್ವಯಂ ಅವರೊಡನೆ ಮಾಡಿಕೊಳ್ಳಿರಿ. ಕೇವಲ ಮಸೀದಿಗೆ ಬರಲು ಮತ್ತು ಜಲ್ಸಕ್ಕಾಗಿ ಬರಲು ಮಾತ್ರ ಲಜ್ಜೆದಾಯಕ ವಸ್ತ್ರಗಳು ಮತ್ತು ಪರದೆ ಇದಾಗಿರಬಾರದು. ಆದರೆ ಇದೊಂದು ನಿಮ್ಮ ವಿಶೇಷ ಗುರುತು ಆಗಿರಬೇಕು. ಎಲ್ಲಿಯೇ ಇರಲಿ ಲಜ್ಜೆದಾಯಕ ವಸ್ತ್ರವಿರಬೇಕು. ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಮಾತನ್ನು ಸದಾ ನೆನಪಿಡಬೇಕಾಗಿದೆ "ಭಯಭಕ್ತಿಯುಳ್ಳವರಾಗಿರಿ. ಲೌಕಿಕ ಮೋಹಕ್ಕೆ ಮನ ಸೋಲಬೇಡಿರಿ. ಮುಗ್ಧ ಮತ್ತು ಪರಿಶುದ್ಧರಾಗಲು ಪ್ರಯತ್ನಪಡಿರಿ. ಇದೇ ಅವಸ್ಥೆಯಲ್ಲಿ ನಿಮ್ಮ ಅಂತ್ಯವಾಗಲು ಪ್ರಯತ್ನಿಸಿರಿ. ಮತ್ತೆ ಹೇಳುತ್ತಾರೆ. ಅಲ್ಲಾಹನು ಕಡ್ಡಾಯಗೊಳಿಸಿದ ನಮಾಝ್ ಝಕಾತ್ ಇತ್ಯಾದಿ ವಿಷಯಗಳಲ್ಲಿ ಅಲಕ್ಷ್ಯತನ ಮಾಡದಿರಿ. ಮತ್ತು ಹೇಳಿದರು. ಈವು ನಿಮ್ಮ ಜವಾಬ್ದಾರಿಯನ್ನು ಎಷ್ಟು ಸಮಂಜಸವಾಗಿ ನಿಭಾಯಿಸಬೇಕೆಂದರೆ ನೀವು ಅಲ್ಲಾಹನ ದೃಷ್ಟಿಯಲ್ಲಿ ಸಜ್ಜನರಾಗಿರಬೇಕು.

ಹುಝೂರ್ ಅನ್ವರ್(ಅಬಿಅ) ಹೇಳಿದರು. ಅಲ್ಲಾಹನು ಪ್ರತಿಯೊಬ್ಬ ಅಹ್ಮದಿ ಸ್ತ್ರೀ, ಹುಡುಗಿಯರು ಇಹಲೋಕದ ಮೇಲೆ ಧರ್ಮಕ್ಕೆ ಆದ್ಯತೆ ನೀಡುತ್ತಾ ಅಲ್ಲಾಹನ ಮತ್ತು ಅವನ ಪ್ರವಾದಿ ರಸೂಲುಲ್ಲಾಹ್(ಸ) ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಆದೇಶಗಳು ಹಾಗೂ ನಿರ್ದೇಶನಗಳ ಮೇಲೆ ನಡೆಯುತ್ತಾ ತಮ್ಮ ಮತ್ತು ತಮ್ಮ ಪೀಳಿಗೆಗಳು ಧರ್ಮರಕ್ಷಕರಾಗಿ ಅವರಿಗೆ ಅಲ್ಲಾಹನೊಡನೆ ಸಂಬಂಧ ಹೊಂದುವಂತೆ ದಯಪಾಲಿಸಿರಿ. ಅಲ್ಲಾಹನು ನಿಮಗೆ ಈ ಕಾಲದ ಇಮಾಮರನ್ನು ಮನ್ನಿಸುವ ಗೌರವ ನೀಡಿದ್ದಾನೆ. ಸದಾ ಅದನ್ನು ಗೌರವಿಸುವರಾಗಲಿ, ಲೋಕದಲ್ಲಿ ಮುಳುಗಿ ದೂರವಾಗದಿರಲಿ, ಆಮೀನ್.

ಕೊನೆಯಲ್ಲಿ ಹುಝೂರ್(ಅಬಿಅ) ಪ್ರಾರ್ಥನೆ ಮಾಡಿಸಿದರು. ಲಜ್ನದೊಂದಿಗಿನ ಈ ಭಾಷಣ 1 ಗಂಟೆ 40 ನಿಮಿಷದವರೆಗೆ ಜಾರಿಯಲ್ಲಿತ್ತು.

ದುಆದ ನಂತರ ಲಜ್ನ ಮತ್ತು ನಾಸಿರಾತ್‌ಗಳು ವಿವಿಧ ತಂಡಗಳಾಗಿ ಅರಬಿ, ಉರ್ದು, ಫ್ರೆಂಚ್ ಭಾಷೆಗಳಲ್ಲಿ ಕವನಗಳು ಮತ್ತು ಪ್ರಾರ್ಥನಾ ಪದ್ಯಗಳು ಪ್ರಸ್ತುಪಡಿಸಿದರು. ಕೊನೆಯಲ್ಲಿ ಆಫ್ರಿಕನ್ ಮಹಿಳೆಯರು ತಮ್ಮ ವಿಶಿಷ್ಠ ಶೈಲಿಯಲ್ಲಿ ಕೆಲವು ತಯ್ಯಬ ಉಚ್ಚರಿಸಿದರು ಮತ್ತು ಅಲ್ಲಾಹು ಅಕ್ಬರ್ ಘೋಷಣೆಗಳನ್ನು ಕೂಗಿದರು.

ಅನಂತರ 2 ಗಂಟೆಗೆ ಸಯ್ಯದುನಾ ಹುಝೂರ್(ಅಬಿಅ) ಪುರುಷರ ಜಲ್ಸ ಸ್ಥಳಕ್ಕೆ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿಯೆಡೆಗೆ ತೆರಳಿದರು.

**ಫ್ರೆಂಚ್ ಅತಿಥಿಗಳೊಡನೆ ಕಾರ್ಯಕ್ರಮ**

ಸಂಜೆ 6 ಗಂಟೆ 40 ನಿಮಿಷಕ್ಕೆ ಹುಝೂರ್(ಅಬಿಅ) ಪುರುಷರ ಮಾರ್ಕಿಯೆಡೆ ಆಗಮಿಸಿ ಫ್ರೆಂಚ್ ಅತಿಥಿಗಳೊಡನೆ ಕಾರ್ಯಕ್ರಮ ಪ್ರಾರಂಭಿಸಿದರು. ಮುಕರ್ರಮ್ ಅತಾಉಲ್ ಹಯ್ಯಿ ಸಾಹಿಬ್ ಖುರ್‌ಆನ್ ಪಠಣ ಮಾಡಿದರು. ಅನಂತರ ಅದರ ಫ್ರೆಂಚ್ ಅನುವಾದ ಪ್ರಸ್ತುತಪಡಿಸಿದರು. ಅನಂತರ ಮುಕರ್ರಮ್ ಆಸಿಫ್ ಆರಿಫ್ ಸಾಹಿಬ್ National Sec. Umar ama ಫ್ರಾನ್ಸ್ ತಮ್ಮ ಪರಿಚಯ ಭಾಷಣ ಮಾಡಿದರು.

ಅನಂತರ ಪ್ರಪ್ರಥಮವಾಗಿ Twie chateau ನ Major Mr. David ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅದರಲ್ಲಿ ಅವರು ಹೀಗೆ ಹೇಳಿದರು. Twie chateau ಎಂಬ ಈ ಸಣ್ಣದಾದ ನಗರದಲ್ಲಿ ಖಲೀಫರ ಆಗಮನ ನಮಗೆ ತುಂಬ ಸಂತೋಷ ಹಾಗೂ ಗೌರವದ ವಿಷಯವಾಗಿದೆ. ಈ ಸಮುದಾಯ ಅಹ್ಮದಿಯಾ ಜಮಾಅತಿನೊಂದಿಗೆ ಸಂಬಂಧ ಬೆಳೆಸುವುದರಲ್ಲಿ ತಮ್ಮ ಶಾಂತಿಯ ಸಂದೇಶ ಅತ್ಯಂತ ಪ್ರಮುಖವಾಗಿದೆ. ನನಗೆ ಭರವಸೆ ಇದೆ. ಹವಾಮಾನ ಸರಿಯಿಲ್ಲದಿದ್ದರೂ ನಮ್ಮ ಜಲ್ಸ ಆರಾಮದಾಯಕವಾಗಿ ನಡೆಯುವದು ಎಂದು. ಈ ಸ್ಥಳವು ಪ್ಯಾರಿಸ್ ನಗರಕ್ಕೆ ಸಮೀಪವಾಗಿದೆ, ತುಂಬ ಒಳ್ಳೆಯ ಹವಾಮಾನವಿದೆ. ನೀವು ನಮ್ಮನ್ನು ಅರಿಯುವಿರಿ ಮತ್ತು ನಿಮ್ಮ ಪರಿಚಯ ನೀಡುವಿರಿ. ನಾನು ನಿಮ್ಮೆಲರನ್ನು ವಿಶೇಷವಾಗಿ ಖಲೀಫರನ್ನು ಇಲ್ಲಿ ಆಗಮಿಸಿದ್ದಕ್ಕೆ ತುಂಬ ಕೃತಜ್ಞನಾಗಿದ್ದೇನೆ. ನಿಮಗೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಬಯಸುತ್ತೇನೆ.

**(ಮುಂದುವರಿಯುವುದು)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

**ಖಾದಿಯಾನ್ ದಾರುಲ್ ಆಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು**

ಸಯ್ಯದುನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಾಹುಲ್ಲಾಹು ತಆಲ ಬಿನಸ್ರಿಹಿಲ್ ಆಝೀಝ್‌ರವರು ಭಾರತದ ಜಮಾಅತಿನ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯ್ಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) ಅಕ್ಟೋಬರ್ 16, 17 ಮತ್ತು 18, 2020 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಜಮಾಅತಿನ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ. **(ಸಂಪಾದಕರು)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅಂತಿಮವಾಗಿ ಸಹಾಬರವರ ನಡಾವಳಿಕೆಗಳು ಅವನಿಗೆ ನಾಚುವಂತೆ ಮಾಡಿತು. ಸಹಾಬರ ಪವಿತ್ರ ನಡವಳಿಕೆ ಜನರನ್ನು ಆಶ್ಚರ್ಯ ಚಕಿತಗೊಳಿಸಿದಂತೆ ಬೇರೆ ಯಾವ ಪವಾಡವು ಪ್ರಭಾವ ಬೀರಲಿಲ್ಲ. ನಮ್ಮ ಸಹೋದರ ಸಂಬಂಧಿ ಎಲ್ಲಿಂದ ಎಲ್ಲಿಗೆ ತಲುಪಿದನು ಎಂದು ಅಚ್ಚರಿಪಟ್ಟರು. ಅಂತಿಮವಾಗಿ ಅವರು ತಮ್ಮನ್ನು ತಾವೇ ತಪ್ಪಿತಸ್ಥರಂತೆ ಭಾವಿಸಿದರು. ಒಂದು ಸಂದರ್ಭದಲ್ಲಿ ಅಕ್‌ರಮನು ಹಝ್‌ರತ್ ರಸೂಲುಲ್ಲಾಹ್(ಸ) ರವರ ಮೇಲೆ ಆಕ್ರಮಣ ಮಾಡಿದ್ದನು ಮತ್ತು ಇನ್ನೊಂದು ಸಂದರ್ಭದಲ್ಲಿ ಅವಿಶ್ವಾಸಿಗಳ ಸೈನ್ಯವನ್ನು ಛಿದ್ರಗೊಳಿಸಿದರು. ಅಂತೂ ರಸೂಲುಲ್ಲಾಹ್(ಸ) ರವರ ಕಾಲದಲ್ಲಿ ಸಹಾಬರು ತೋರಿದ ಪವಿತ್ರ ಸಜ್ಜನಾತ್ಮಕ ಮಾದರಿಗಳನ್ನು ಇಂದು ನಾವು ಹೆಮ್ಮೆಪಡುವ ಮೂಲಕ ಅದನ್ನು ಪುರಾವೆಯಾಗಿ ವಚನಗಳ ರೂಪದಲ್ಲಿ ವಿವರಿಸುತ್ತೇವೆ. ಅದಾಗ್ಯೂ ಅಕ್‌ರಮನ ನಮೂನೆಯೇ ನೋಡಿ ಅವಿಶ್ವಾಸಿಯಾಗಿದ್ದಾಗ ಅವಿಶ್ವಾಸ, ಮತ್ಸರ ಇತ್ಯಾದಿ ದುಷ್ಟ ಸ್ವಭಾವಗಳನ್ನು ಹೊಂದಿದ್ದನು. ಇಸ್ಲಾಮ್ ಧರ್ಮವನ್ನು ಮೋಸದಿಂದಲೇ ಅಳಿಸಿಹಾಕಬೇಕೆಂದು ಬಯಸುತ್ತಿದ್ದನು. ಆದರೆ ಅಲ್ಲಾಹನು ಅವನ ಮೇಲೆ ಔದಾರ್ಯದಿಂದ ಅವನಿಗೆ ಇಸ್ಲಾಮ್ ಧರ್ಮ ಸ್ವೀಕರಿಸುವ ಭಾಗ್ಯ ದಯಪಾಲಿಸಿದನು. ಆಗ ಅವನಲ್ಲಿ ಯಾವ ರೀತಿಯ ಪರಿವರ್ತನೆ ಉಂಟಾಯಿತೆಂದರೆ ಅವನ ಮತ್ಸರ ಅಹಂಕಾರವು ಹೇಳ ಹೆಸರಿಲ್ಲದಂತೆ ಪಾಲಾಯಣವಾಗಿ ಅದರ ಬದಲಾಗಿ ವಿನಯ, ಕರುಣೆಯ ಸಾಕ್ಷಾತ್ ರೂಪ ದಾರಣೆ ಮಾಡಿ ಇಸ್ಲಾಮ್ ಧರ್ಮಕ್ಕೆ ನಾಂದಿ ಹಾಡಿದನು. ಮತ್ತು ಇಸ್ಲಾಂ ಧರ್ಮದ ಸತ್ಯತೆಗೆ ಸಾಕ್ಷಿಯಾದನು. ಒಂದು ಸಂದರ್ಭದಲ್ಲಿ ಅವಿಶ್ವಾಸಿಗಳ ವಿರುದ್ಧ ಯುದ್ಧದಲ್ಲಿ ಅಕ್‌ರಮನು ಆ ಸೈನ್ಯ ತುಕಡಿಯ ಸೈನ್ಯಾಧಿಪತಿಯಾಗಿದ್ದನು. ಅವಿಶ್ವಾಸಿಗಳು ಕಠಿಣವಾಗಿ ವರ್ತಿಸಿದರು. ಇಸ್ಲಾಮಿನ ಸೈನ್ಯವು ಸೋಲುವ ಹಂತಕ್ಕೆ ತಲುಪಿದಾಗ. ಈ ಸ್ಥಿತಿ ಕಂಡು ಅಕ್‌ರಮನು ಕುದುರೆಯಿಂದ ಕೆಳಗಿಳಿದನು. ಜನರು ಕೇಳಿದರು. ನೀವೇಕೆ ಕೆಳಗೆ ಇಳಿಯುತ್ತೀರಿ. ಬಹುಶಃ ಏನೂ ಹೆಚ್ಚು ಕಡಿಮೆಯಾದರೆ ಕುದುರೆ ಸಹಾಯಕ್ಕೆ ಬರಬಹುದು. ಆಗ ಅವರು ಹೇಳಿದರು. ನನಗೆ ಈಗ ಆ ಸಮಯ ನೆನಪಿಗೆ ಬರುತ್ತಿದೆ. ನಾನು ಒಂದು ಕಾಲಕ್ಕೆ ಅಲ್ಲಾಹನ ಪ್ರವಾದಿಗಳಾದ ರಸೂಲುಲ್ಲಾಹ್(ಸ) ರ ವಿರುದ್ಧ ಹೋರಾಡುತ್ತಿದ್ದೆ. ಆದುದರಿಂದ ಈಗ ನಾನು ನನ್ನ ಪ್ರಾಣಕೊಟ್ಟು ನನ್ನ ಪಾಪಗಳ ಪರಿಹಾರ ಬಯಸುತ್ತೇನೆ. ಈಗ ನೋಡಿ ಅವರ ಅವಸ್ಥೆ ಎಲ್ಲಿಗೆ ಬಂದು ತಲುಪಿತು. ಅವರು ಈಗ ಸ್ಮರಣೀಯರಾದರು. ನೆನಪಿಡಿರಿ! ಯಾರು ಅಲ್ಲಾಹನ ಸಂತೃಪ್ತಿ ಬಯಸುವವರು ಅವರೊಡನೆ ಅಲ್ಲಾಹನ ಅನುಗ್ರಹ ಶಾಮೀಲಾಗಿರುತ್ತದೆ. ಅಲ್ಲಾಹನು ಎಲ್ಲೆಡೆ ಅವರಿಗೆ ರಝೀ ಅಲ್ಲಾಹ್ ಅನ್‌ಹಮ್ (ನನ್ನ ಸಂತೃಪ್ತಿ ನಮಗೆ ಲಭಿಸಿದೆ) ಎಂದು ಹೇಳಿದನು.

**ಸರಿಯಾದ ವಿಶ್ವಾಸಿಗಳು ಮತ್ತು ಸತ್ಕರ್ಮಗಳು**

ಅದಲ್ಲದೇ ಇನ್ನೆರಡು ವಿಧಗಳಿವೆ. ಅದನ್ನು ದೃಷ್ಟಿಯಲ್ಲಿಟ್ಟುಕೊಳ್ಳುವುದು ಸತ್ಯಸಂಧಕ ನಿಷ್ಠಾವಂತನ ಕಾರ್ಯವಾಗಬೇಕಾಗಿದೆ. ಅವುಗಳಲ್ಲಿ ಒಂದು ಸರಿಯಾದ ವಿಶ್ವಾಸಗಳಾಗಿವೆ. ಇದು ಅಲ್ಲಾಹನ ಅತ್ಯಂತ ಅಪಾರ ಅನುಗ್ರಹವಾಗಿದೆ. ಅವನು ನಮಗೆ ಶ್ರಮವಿಲ್ಲದೇ ರಸೂಲುಲ್ಲಾಹ್(ಸ) ರವರ ಮುಖಾಂತರ ಸರಿಯಾದ ವಿಶ್ವಾಸಗಳ ಮಾರ್ಗವನ್ನು ದಯಪಾಲಿಸಿದ್ದಾನೆ. ಅದೇ ಮಾರ್ಗ ಈ ಕಾಲದಲ್ಲಿ ನಿಮಗೆ ದೊರಕಿದೆ. ಹಲವು ಮತ ಪಂಡಿತರೆನಿಸಿಕೊಂಡವರಿಗೆ ಈ ಭಾಗ್ಯ ದೊರೆಯಲಿಲ್ಲ. ಆದುದರಿಂದ ಅಲ್ಲಾಹನಿಗೆ ಕೃತಜ್ಞರಾಗಿರಿ. ಅವನಿಗೆ ಕೃತಜ್ಞತೆ ಸಲ್ಲಿಸುವುದೆಂದರೆ, ಸರಿಯಾದ ವಿಶ್ವಾಸಗಳನ್ನು ಹೊಂದಿದ ಮೇಲೆ ಸತ್ಕರ್ಮ ಗೈಯುವುದಾಗಿದೆ. ಇದು ಎರಡನೆಯ ವಿಧವಾಗಿರುತ್ತದೆ. ನೀವು ಸನ್ನಡತೆಯಿಂದ ಪ್ರಾರ್ಥಿಸಿರಿ. ಅವನ ಈ ಸರಿಯಾದ ವಿಶ್ವಾಸಗಳು ಝಕಾತ್ ಇತ್ಯಾದಿ ಆರಾಧನೆಯ ಭಾಗವಾಗಿವೆ. ಉದಾಹರಣೆಗೆ ನಮಾಝ್, ಇದು ಲೋಕಕ್ಕೆ ಆಗಮಿಸಿದ್ದು. ಆದರೆ ಲೋಕದಿಂದ ಬಂದದ್ದಲ್ಲ. ರಸೂಲುಲ್ಲಾಹ್(ಸ) ಹೇಳಿದರು. **ಖುರ್ರತು ಅಯಿನಿ ಫಿಸ್ಸಲಾತಿ. (ಮಲ್‌ಫೂಝಾತ್ ಸಂಪುಟ 1, ಪುಟ, 127–129 ಮುದ್ರಣ 2018 ಖಾದಿಯಾನ್)**

**ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ:–**

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಅ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕ)**

**ಅನ್ಯ ಗೋತ್ರಗಳೊಂದಿಗೆ ವಿವಾಹ**

**ಹಝ್‌ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್–ವ–ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly BADAR Qadian
Distt: Gurdaspur (Pb.) INDIA Qadian - 143516
Vol No.1 Thursday, 16 April 2020 Issue No. 14

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 13ರ ವರದಿಯ ಉಳಿದ ಭಾಗ)**

ಓರ್ವ ವಾಖಿಫ ನೌ ಬಾಲಕಿ ಫ್ರೆಂಚ್ ಭಾಷೆಯಲ್ಲಿ ಪ್ರಶ್ನೆ ಮಾಡಿದಳು: ಹುಝೂರ್(ಅಬಿಅ) ಯಾವುದಾದರು ಒಂದು ಆಸಕ್ತಿಯುಳ್ಳ ಸ್ವಪ್ನ ಮತ್ತು ತಾವು ಅದು ಪದೇ ಪದೇ ಆಗಬೇಕು ಎಂದು ಹೇಳಬಹುದೇ? ಆಗ ಅವರು ಹೇಳಿದರು ತುಂಬ ಹಳೆಯ ಸ್ವಪ್ನ ಇದೆ. ಒಂದು ಸಂದರ್ಭದಲ್ಲಿ ನಾನು ಪರೀಕ್ಷೆ ಕೊಡುತ್ತಿದ್ದೆ. ಆಗ ಸ್ವಪ್ನ ಕಂಡಿದ್ದೆ. ಆ ಸಮಯ ಅಲ್ಲಾಹನು ನನಗೆ ಹಝ್ರತ್ ಮಸೀಹ್ ಮೌಊದ್(ಅ) ರವರ ದೇವವಾಣಿ **ಯನ್‌ಸುರುಕ ರಿಜಾಲುನ್ ನೂಇ ಇಲೈಹಿಮ್ ಮಿನಸ್ಸಮಾಯಿ** ತೋರಿಸಿದನು. ಅದು ಅಲ್ಲಾಹನು ನನಗೂ ತೋರಿಸಿದನು ಈ ನೆಲೆಯಲ್ಲಿ ಅನಂತರ ವರ್ಷಾಗಳ ಅವಧಿಯಿಂದ ಇಲ್ಲಿಯವರೆಗೆ ಅಲ್ಲಾಹನು ನನಗೆ ಸಹಕರಿಸುತ್ತಿದ್ದಾನೆ.

ಇನ್ನೋರ್ವ ವಾಖಿಫ ನೌ ಬಾಲಕಿ ಪ್ರಶ್ನೆ ಮಾಡಿದಳು. ಹುಝೂರ್(ಅಬಿಅ) ನೀವು ಶಾಲೆಯಲ್ಲಿ ಓದುತ್ತಿರುವಾಗ ಯಾವುದಾದರು ವಿಷಯ ಕಷ್ಟಕರವಾಗಿ ಕಾಣುತ್ತಿತ್ತು? ಆಗ ಅವರು ಹೇಳಿದರು: ನನಗೆ ಎಲ್ಲ ವಿಷಯವೂ ಕಷ್ಟಕರವಾಗಿ ಕಾಣುತ್ತಿತ್ತು. ನಾನೇನೂ ಒಳ್ಳೆಯ ವಿದ್ಯಾರ್ಥಿಯಾಗಿರಲಿಲ್ಲ. ಆದರೆ ಕೊನೆಯಲ್ಲಿ ಅಲ್ಲಾಹನು ತನ್ನ ಅನುಗ್ರಹದಿಂದ ಸ್ವಲ್ಪಮಟ್ಟಿಗೆ ಸುಧಾರಿಸಿದನು. ನಾನು ಹೇಗೆ ಎಂ.ಎಸ್.ಸಿ ಮಾಡಿದೆ ಗೊತ್ತಾಗಲಿಲ್ಲ. ಇಂದಿನ ಅವಸ್ತೆಯಲ್ಲಿ ನಿಮಗೆ ಅಂತೂ ಓದಬೇಕಾಗುವುದು

ಓರ್ವ ವಾಖಿಫ್ ನೌ ಪ್ರಶ್ನಿಸಿದರು. ತಮ್ಮ ಬಾಲ್ಯದಲ್ಲಿ ನೀವು ತಾಯಿಗೆ ತುಂಬ ಹತ್ತಿರವಾಗಿದ್ದಿರೋ ಅಥವಾ ತಂದೆಯುವರಿಗೋ? ಆಗ ಹುಝೂರ್(ಅಬಿಅ) ಹೇಳಿದರು. ಇಬ್ಬರಿಗೂ ಹತ್ತಿರವಾಗಿದ್ದೆ. ನಮ್ಮ ಕಾಲದಲ್ಲಿ ಹಳೆಯ ಜನರು ಸಜ್ಜನರು ಒಂದು Barrier ಇಡುತ್ತಿದ್ದರು. ಆದರೆ ಊಟ ಇತ್ಯಾದಿಗಳ ಬಗ್ಗೆ ಅವರಿಬ್ಬರೂ ಆಸಕ್ತಿ ವಹಿಸುತ್ತಿದ್ದರು. ಅಸ್ವಸ್ಥರಾದರೆ ತಂದೆಯರು ಹೇಳುತ್ತಿದ್ದರು ರಜೆ ಮಾಡಿರಿ ಶಾಲೆಗೆ ಹೋಗುವುದು ಬೇಡ. ಆಗ ತಂದೆಯರು ನಮಗೆ ತುಂಬ ಒಳ್ಳೆಯವರಾಗಿ ಕಾಣುತ್ತಿದ್ದರು. ಊಟದ ವಿಷಯದಲ್ಲಿ ಮತ್ತು ಇತರ ವಿಷಯಗಳಲ್ಲಿ ಇಬ್ಬರೂ ಚೆನ್ನಾಗಿ ವ್ಯವಹರಿಸುತ್ತಿದ್ದರು. ಆಗ ಆ ಬಾಲಕಿ ಕೇಳಿದಳು. ತಮಗೆ ಯಾರಿಂದ ಹೆಚ್ಚು ಹೆದರಿಕೆಯಾಗುತ್ತಿತ್ತು? ಆಗ ಹುಝೂರ್(ಅಬಿಅ) ಹೇಳಿದರು. ಯಾರಿಂದಲೂ ಹೆದರಿಕೆ ಆಗುತ್ತಿರಲಿಲ್ಲ. ಆದರೆ ಹೌದು ಯಾವುದೇ ತಪ್ಪು ಮಾತು ಹೊರಡಬಾರದೆಂದು ಭಯವಿರುತ್ತಿತ್ತು. ಏಕೆಂದರೆ ಅವರು ಕೋಪಿಸಿಕೊಳ್ಳಬಾರದು. ಅದು ಇಬ್ಬರಿಂದಲೂ ಸಾಧ್ಯವಿತ್ತು.

**5 ಅಕ್ಟೋಬರ್ 2019 ಶನಿವಾರ**

**ಮಹಿಳೆಯರ ವಿಭಾಗದಲ್ಲಿ ಭಾಷಣ**

ತಶಹುದ್, ತಾಹೂಝ್ ಮತ್ತು ಸುರಾ ಫಾತಿಹಾ ಪಠಣದ ನಂತರ ಹುಝೂರ್ ಅನ್ವರ್(ಅಬಿಅ) ಹೇಳಿದರು. ನಾನು ನಿನ್ನೆಯ ಖುತಬದಲ್ಲಿ ಹೇಳಿದಂತೆ ಇಂದು ಲೋಕವು ಬಹುವೇಗದಿಂದ ತಮ್ಮ ಪ್ರಭು ಸೃಷ್ಟಿಕರ್ತನಿಂದ ದೂರ ಸರಿಯುತ್ತಿದೆ. ಒಂದು ಬಹು ದೊಡ್ಡ ಸಂಖ್ಯೆಯು ಕೇವಲ ಧರ್ಮದಿಂದ ಮಾತ್ರ ದೂರವಾಗುತ್ತಿಲ್ಲ. ಬದಲಾಗಿ ದೇವರ ಅಸ್ತಿತ್ವವನ್ನೇ ನಿರಾಕರಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಇರುವಾಗ ಲೋಕದ ಭೌತಿಕ ವಸ್ತುಗಳನ್ನೇ ನೆಚ್ಚಿಕೊಂಡವರು ಈ ಪರಿಸ್ಥಿತಿಗಳ ಪ್ರಭಾವಕ್ಕೆ ಒಳಗಾಗುತ್ತಾರೆ. ಇದರಲ್ಲಿ ಹಿರಿಯರೂ ಶಾಮೀಲಾಗಿದ್ದಾರೆ. ಮಕ್ಕಳೂ ಇದ್ದಾರೆ. ಯುವಕರೂ ಇದ್ದಾರೆ. ಇಂತಹ ಪರಿಸರದಲ್ಲಿ ನಮ್ಮ ಮೇಲೆ ಬಹುದೊಡ್ಡ ಜವಬ್ದಾರಿ ಇದೆ. ಅದೇನೆಂದರೆ ತಮ್ಮ ಪರಿಸರದ ಮೇಲೆ ನಿಗಾವಹಿಸಬೇಕು ಮತ್ತು ತನ್ನನ್ನು ಈ ಪರಿಸರದಿಂದ ರಕ್ಷಿಸಿಕೊಳ್ಳಬೇಕು. ಅಂತೆಯೇ ಮಕ್ಕಳನ್ನೂ ಈ ಪರಿಸರ ಪ್ರಭಾವದಿಂದ ರಕ್ಷಿಸಬೇಕಾಗಿದೆ. ಸ್ವಯಂ ಪ್ರಯತ್ನಪಟ್ಟು ಅಲ್ಲಾಹನ ಸಾನಿಧ್ಯವಹಿಸಲು ಪ್ರಯತ್ನಿಸಬೇಕಾಗಿದೆ ಮತ್ತು ತನ್ನ ಮಕ್ಕಳನ್ನು ಅಲ್ಲಾಹನ ಸಾನಿಧ್ಯಕ್ಕೆ ಒಪ್ಪಿಸಲು ಪ್ರಯತ್ನಿಸಬೇಕಾಗಿದೆ. ತನ್ನನ್ನೂ ಲೋಕದ ಅನಾಹುತಗಳಿಂದ ರಕ್ಷಿಸಿಕೊಳ್ಳಬೇಕು ಮತ್ತು ತನ್ನ ಸಂತಾನವನ್ನು ಲೋಕದ ಅನಾಹುತಗಳಿಂದ ರಕ್ಷಿಸಬೇಕಾಗಿದೆ. ಮಕ್ಕಳ ಮುಂದೆ ತನ್ನ ಮಾದರಿ ಪ್ರದರ್ಶಿಸಬೇಕು. ಅದನ್ನು ನೋಡಿ ಮಕ್ಕಳು ಆ ಮಾರ್ಗಗಳ ಮೂಲಕ ಅಲ್ಲಾಹನ ಸಾಮಿಪ್ಯ ಪಡೆಯುವಂತಾಗಬೇಕು. ಅಲ್ಲಾಹನ ಮೆಲೆ ವಿಶ್ವಾಸ ಹೊಂದುವಂತಾಗಬೇಕು. ಅಲ್ಲಾಹನ ಪ್ರೀತಿಗೆ ಪಾತ್ರರಾಗಿ ಪರಲೋಕವನ್ನು ಸುಧಾರಿಸಿಕೊಳ್ಳುವವರಾಗಬೇಕು.

ಹುಝೂರ್ ಅನ್ವರ್(ಅಬಿಅ) ಹೇಳಿದರು. ಎಲ್ಲಿ ಪುರುಷರಿಗೆ ತಮ್ಮ ಮಾದರಿಯನ್ನು ಸ್ಥಾಪಿಸಿ ಈ ಭೌತಿಕ ಲೋಕದ ಮೋಹದಿಂದ ರಕ್ಷಿಸಿಕೊಂಡು ಜೀವನ ಸಾಗಿಸುವ ಜವಬ್ದಾರಿ ಇದೆಯೋ ಅದೇ ರೀತಿ ಮಹಿಳೆಯರ ಜವಬ್ದಾರಿಯೂ ಆಗಿದೆ. ಮಕ್ಕಳ ತರಬೇತಿಯ ಹೊಣೆ ಅಲ್ಲಾಹ್ ಮತ್ತು ಅವನ ಪ್ರವಾದಿ ಮಹಿಳೆಯರಿಗೆ ಒಪ್ಪಿಸಿದ್ದಾರೆ. ನಮ್ಮ ಮಹಿಳೆಯರು ಅಲ್ಲಾಹನನ್ನು ಪ್ರೀತಿಸುವುದಾದರೆ, ಅಲ್ಲಾಹನ ಭಯವನ್ನು ತಮ್ಮ ಮನದಲ್ಲಿ ಇರಿಸಿಕೊಳ್ಳುವುದಾದರೆ ತಮ್ಮ ಮಕ್ಕಳನ್ನು ರಕ್ಷಿಸಿಕೊಳ್ಳಲು ಈ ಪರಿಸರದಲ್ಲಿ ತುಂಬ ಶ್ರಮವಹಿಸುವ ಅಗತ್ಯವಿದೆ. ಹಲವು ಮಾತೆಯರು ತಮ್ಮ ಮಕ್ಕಳನ್ನು “ವಕ್ಫೆ ನೌ” ಗೆ ಒಪ್ಪಿಸಿರುತ್ತಾರೆ. ಅಂತೂ ಅವರ ತರಬೇತಿ ಮಾಡುವುದು ಅವರ ಜವಾಬ್ದಾರಿಯಾಗಿರುತ್ತದೆ. ಆದರೆ ಎಲ್ಲಾ ಮಕ್ಕಳ ಮೇಲೆ ನಿಗಾವಹಿಸುವುದಿಲ್ಲ. ವಕ್ಫೆ ನೌ ಮತ್ತು ವಕ್ಫೆ ನೌ ಅಲ್ಲದ ಮಕ್ಕಳ ಮೇಲೆ ಗಮನವಿಲ್ಲವಾದರೆ ಅವರ ತರಬೇತಿಯ ಮೇಲೆ ದುಷ್ಪರಿಣಾಮ ಬೀರಬಹುದಾಗಿದೆ. ವಕ್ಫೆ ನೌ ಅವರ ತರಬೇತಿ ಸರಿಯಾಗಲಿಕ್ಕಿಲ್ಲ. ಆದ್ದರಿಂದ ಕೇವಲ ವಕ್ಫೆ ನೌ ಮಕ್ಕಳ ಮೇಲೆ ಗಮನವಹಿಸಬೇಕಾಗಿದೆ ಎಂದು ಭಾವಿಸಬೇಡಿ ಅಥವಾ ಕೇವಲ ಬಾಲಕಿಯರಿಗೆ ಅಡೆ ತಡೆ ಒಡ್ಡಬೇಕು ಎಂದು ಭಾವಿಸಬೇಡಿರಿ. ಕೆಲ ತಾಯಿಯರು ಬಾಲಕರ ಕಡೆ ಹೆಚ್ಚು ಗಮನ ವಹಿಸುತ್ತಾರೆ ಅಥವಾ ಕೆಲ ತಾಯಂದಿರು ಬಾಲಕರನ್ನು ಹೆಚ್ಚು ಪ್ರೀತಿಸುತ್ತಾರೆ ಮತ್ತು ಬಾಲಕಿಯರಿಗೆ ಕಿರುಕುಳ ನೀಡುತ್ತಾರೆ. ತರಬೇತಿಯಲ್ಲಿ ಈ ರೀತಿಯ ತಾರತಮ್ಯ ಇದ್ದರೆ, ಒಬ್ಬರ ಪಕ್ಷ ವಹಿಸಿದರೆ ಮಕ್ಕಳು ಖಂಡಿತವಾಗಿಯೂ ಕೆಡುವನು.

ಹುಝೂರ್ ಅನ್ವರ್(ಅಬಿಅ) ನುಡಿದರು. ಪ್ರಸ್ತುತ ಪರಿಸರದಲ್ಲಿ ತರಬೇತಿಯ ವಿಷಯವು ತುಂಬ ಜಲ್ವಂತ ಸಮಸ್ಯೆಯಾಗಿದೆ. ಆದ್ದರಿಂದ ತುಂಬ ಜಾಗ್ರತೆ ವಹಿಸಿ ಹೆಜ್ಜೆ ಮುಂದಿಡ ಬೇಕಾಗುವುದು. ಪುರುಷರು ತಮ್ಮ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಭಾಯಿಸುತ್ತಿಲ್ಲವಾದರೆ ಮತ್ತು ಅವರ ಮಕ್ಕಳ ಮೇಲೆ ವಿಶೇಷವಾಗಿ ಗಂಡು ಮಕ್ಕಳ ಮೇಲೆ ಕೆಟ್ಟ ಪ್ರಭಾವ ಬೀರುವುದಾದರೆ ಇಂತಹ ಪುರುಷರಿಗೆ ಸಲಹೆ ನೀಡಿ ತಮ್ಮ ಪತಿಯರ ಕಡೆ ಗಮನ ವಹಿಸಬೇಕು.

ಹುಝೂರ್ ಅನ್ವರ್(ಅಬಿಅ) ಹೇಳಿದರು. ಮಹಿಳೆಯರು ತನ್ನ ಮನೆಯ ಉಸ್ತುವಾರಿ ವಹಿಸಿ ಒಂದು ಮಾದರಿಯಾಗುವ ಅವಶ್ಯಕತೆ ಇದೆ. ನಮಗೆ ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. ನನ್ನ ಸಹಾಬರಿಗೆ ನಮ್ಮ ಜೀವನ ಮಾದರಿಯಾಗಿದೆ. ಕೇವಲ ಪುರುಷರ ಮಾದರಿಯಾಗಿ ಬಿಂಬಿತವಾಗಲಿಲ್ಲ ಮಹಿಳೆಯರಿಗೂ ಮಾದರಿಯಾಗಿದ್ದಾರೆ. ಮಹಿಳೆಯರೂ ಕೂಡ ಹಝ್ರತ್ ರಸೂಲುಲ್ಲಾಹ್(ಸ) ರಲ್ಲಿ ಬೈಅತ್ ಮಾಡುವ ಸೌಭಾಗ್ಯ ಪಡೆದವರಾಗಿದ್ದಾರೆ ಮತ್ತು ತಮ್ಮ ಮಾದರಿಗಳನ್ನು ಸ್ಥಾಪಿಸಿದ್ದಾರೆ.

ಅವರು ತಮ್ಮ ಪರಿಶುದ್ಧ ಮಾದರಿಯನ್ನು ಪ್ರದರ್ಶಿಸಬೇಕು. ಸಹಾಬಿಯಾತ್ ಸಹ ಹೀಗೆ ಅಲ್ಲಾಹನ ಆರಾಧನೆಯ ಅನುಸರಿಸಿ ಯೋಗ್ಯ ಮಾದರಿಗಳನ್ನು ಪ್ರಸ್ತುಪಡಿಸಿದ್ದಾರೆ. ಅವರು ರಾತ್ರಿಗಳು ಆರಾಧನೆಗಳಲ್ಲಿ ವ್ಯಯಿಸುವ, ಹಗಳಲ್ಲಿ ವ್ರತ (ಉಪವಾಸ) ವಹಿಸುವ ಉದಾಹರಣೆಗಳು ದೊರೆಯುತ್ತವೆ. ಅವರ ಪತಿಯರು ಹಝ್ರತ್ ರಸೂಲುಲ್ಲಾಹ್(ಸ) ರವರ ಮುಂದೆ ದೂರು ಕೊಡಬೇಕಾಗುತ್ತಿತ್ತು. “ನನ್ನ ಪತ್ನಿ ರಾತ್ರಿಯಿಡೀ ಆರಾಧನೆಯಲ್ಲಿ ತೊಡಗಿರುತ್ತಾರೆ. ತಮ್ಮ ಜವಾಬ್ದಾರಿಗಳನ್ನು ಮತ್ತು ಹಕ್ಕುಗಳನ್ನು ಪೂರೈಸುವುದಿಲ್ಲ”. ಆಗ ಹಝ್ರತ್ ರಸೂಲುಲ್ಲಾಹ್(ಸ) ರವರು ಮಹಿಳೆಯರಿಗೂ ಉಪದೇಶ ನೀಡಬೇಕಾಯಿತು. “ಮಧ್ಯಮ ರೀತಿಯ ಹಾದಿಯನ್ನು ಅನುಸರಿಸಿರಿ” ಎಂದು. ಸತತವಾಗಿ ಮನೆಯ ಜವಾಬ್ದಾರಿಗಳನ್ನು ಮರೆತು ಆರಾಧನೆಯಲ್ಲಿ ತೊಡಗುವುದು ಬೇಡ. ಹಾಗೆಯೇ

*(ಉಳಿದ ವರದಿ ಪುಟ ಸಂಖೆ 09 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.